# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು – 570006

**ದಿನಾಂಕ: 31.10.2025** ರಂದು **ಪೂರ್ವಾಹ್ನ 11.30** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ಶರಣಪ್ಪ ವಿ. ಹಲಸೆ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನ ಮಂಡಳಿ ಸಭಾಂಗಣದಲ್ಲಿ ಮುಂದೂಡಲ್ಪಟ್ಟ ವಿಷಯಗಳ ಬಗೆಗಿನ ವ್ಯವಸ್ಥಾಪನಾ ಮಂಡಳಿಯ **184ನೇ** ಸಾಮಾನ್ಯ ಸಭೆಯ ನಡಾವಳಿ.

| ಉಪಸ್ಥಿತರು | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು. | **ಪ್ರೊ. ನವೀನ್ ಕುಮಾರ್ ಎಸ್.ಕೆ.**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು<br>ಕರಾಮುವಿ, ಮೈಸೂರು. |
| **ಪ್ರೊ. ರಾಮನಾಥಂ ನಾಯಿಡು**<br>ಡೀನ್(ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ ಮೈಸೂರು. | **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ. |
| **ಡಾ. ಬಿ.ಜಿ. ಪಾಟೀಲ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. ಇ/8/862, ಐರಾವಳಿ, ನೆಹರು<br>ಗೂಂಜ್, ಕಲಬುರಗಿ - 585104 | **ಶ್ರೀ. ಕೆ. ಹರೀಶ್ ಗೌಡ**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.1, ಸಿ.ಹೆಚ್.35, ಕಾಂತರಾಜು ಅರಸ್ ರಸ್ತೆ,<br>ಕೆ.ಜಿ.ಕೊಪ್ಪಲು, ಮೈಸೂರು - 570009 |
| **ಶ್ರೀ. ಡಿ. ರವಿಶಂಕರ್**<br>ವಿಧಾನಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ.139/1, ಕೆಸ್ತೂರು ಕೊಪ್ಪಲು ಗ್ರಾಮ,<br>ಕೆಸ್ತೂರು ಅಂಚೆ, ಕೃಷ್ಣರಾಜನಗರ ತಾಲ್ಲೂಕು,<br>ಮೈಸೂರು ಜಿಲ್ಲೆ. | **ಡಾ. ಮಹೇಶ್ .ಎಸ್**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಸೋಸಲೆ ಗ್ರಾಮ ಮತ್ತು ಅಂಚೆ,<br>ಟಿ. ನರಸೀಪುರ ತಾಲ್ಲೂಕು,<br>ಮೈಸೂರು ಜಿಲ್ಲೆ - 571120. |
| **ಶ್ರೀಮತಿ. ಮಾಲತಿ .ಟಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 355/1, ಮೊದಲ ಮಹಡಿ,<br>9ನೇ ಕ್ರಾಸ್, ಬಾಪೂಜಿ ಬಡಾವಣೆ,<br>ಚಂದ್ರಾ ಲೇಔಟ್, ಬೆಂಗಳೂರು - 560040. | **ಶ್ರೀಮತಿ. ಪ್ರಾಚಿ ಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. ಇ–402, ಡಾ. ವಿಷ್ಣುವರ್ಧನ್ ರೋಡ್,<br>ಬನಶಂಕರಿ, ಬೆಂಗಳೂರು - 560098. |
| **ಶ್ರೀ. ರಮೇಶ್ ಗುಬ್ಬೇವಾಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಗುಬ್ಬೇವಾಡ, ಸಿಂಧಗಿ ತಾಲ್ಲೂಕು,<br>ವಿಜಯಪುರ ಜಿಲ್ಲೆ. | **ಶ್ರೀ ಮಂಜು .ಆರ್**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಹಳ್ಳಿದಿಡ್ಡಿ ಗ್ರಾ., ಯೇಚಗಳ್ಳಿ ಅಂಚೆ,<br>ನಂಜನಗೂಡು ತಾಲ್ಲೂಕು,<br>ಮೈಸೂರು ಜಿಲ್ಲೆ - 571302. |

ಕುಲಪತಿಗಳು ಕುಲಸಚಿವರು

| ಅನುಪಸ್ಥಿತರು | |
|---|---|
| **ಅಪರ ಮುಖ್ಯ ಕಾರ್ಯದರ್ಶಿಗಳು**<br>ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ) ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು - 560001. | **ಅಪರ ಮುಖ್ಯ ಕಾರ್ಯದರ್ಶಿಗಳು**<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯರು,<br>ಬೆಂಗಳೂರು - 560001 |

**ಮಾನ್ಯ ಕುಲಪತಿಗಳ ಸ್ವಾಗತದೊಂದಿಗೆ ಸಭೆಯು ಪ್ರಾರಂಭವಾಯಿತು.**

ಮಾನ್ಯ ಕುಲಪತಿಗಳು ಮಾತನಾಡಿ, 184ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ವಿಷಯಸೂಚಿ ಪ್ರಕಾರ ವಿವರಿಸಲು ಕುಲಸಚಿವರಿಗೆ ಸೂಚಿಸಿದರು.

ಕುಲಸಚಿವರು ದಿನಾಂಕ: 31.10.2025ರಂದು ಜರುಗಿದ ವ್ಯವಸ್ಥಾಪನ ಮಂಡಳಿಯ 184ನೇ ಸಾಮಾನ್ಯ ಸಭೆಯಲ್ಲಿ ಕೈಗೊಂಡ ತೀರ್ಮಾನಗಳ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ ವಿಷಯ ಸಂಖ್ಯೆ: 183.01 (ಅ) ಬಗ್ಗೆ ವಿವರಿಸಿದರು.

**ವಿಷಯ ಸಂಖ್ಯೆ: 184.01 (ಅ)**

**ವಿಷಯ: ದಿನಾಂಕ: 09–06–2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 183ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ.**

– * –

ದಿನಾಂಕ: 09–06–2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 183ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿ ಮುಂದೆ ವಿಷಯ ಮಂಡಿಸಿದೆ.

*****

**ತೀರ್ಮಾನ: ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 09–06–2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 183ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಸ್ಥಿರೀಕರಿಸಲಾಯಿತು.**

#####

**ವಿಷಯ ಸಂಖ್ಯೆ: 184.01 (ಆ)**

**ವಿಷಯ: ದಿನಾಂಕ: 09–06–2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 183ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ಅನುಸರಣಾ ವರದಿ.**

– * –

ದಿನಾಂಕ: 09–06–2025ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 183ನೇ ಸಾಮಾನ್ಯ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಅನುಸರಣಾ ವರದಿಯನ್ನು ಅನುಮೋದಿಸುವ ಸಂಬಂಧ ಮಂಡಿಸಿದೆ.

*****

183ನೇ ಸಾಮಾನ್ಯ ಸಭೆಯ ತೀರ್ಮಾನಗಳಲ್ಲಿ ಕಟ್ಟಡ ಕಾಮಗಾರಿ ವಿಷಯಕ್ಕೆ ಸಂಬಂಧಪಟ್ಟಂತೆ ಏಳು ವ್ಯವಸ್ಥಾಪನ ಮಂಡಳಿ ಸದಸ್ಯರುಗಳಿಂದ ಆಕ್ಷೇಪಣೆಗಳು ಬಂದಿದ್ದು, ವಿಶ್ವವಿದ್ಯಾನಿಲಯದ ಕಟ್ಟಡ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಮಾನ್ಯ ಕುಲಪತಿಗಳ ಮಾತನಾಡಿ ಈಗಾಗಲೇ ಕಲ್ಯಾಣ ಕರ್ನಾಟಕ ಭಾಗದ ಕಲಬುರ್ಗಿ, ಯಾದಗಿರಿ, ವಿಜಯಪುರ ಇನ್ನೂ ಮುಂತಾದ ಸ್ಥಳಗಳಲ್ಲಿ ವಿಶ್ವವಿದ್ಯಾನಿಲಯದಿಂದ ಯಾವುದೇ ಹಣ ಪಡೆಯದೇ ಸರ್ಕಾರ ಉಚಿತವಾಗಿ ಕರಾಮುವಿ ಪ್ರಾದೇಶಿಕ ಕೇಂದ್ರಗಳ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಜಮೀನುಗಳನ್ನು ನೀಡಿದ್ದು, ಅವುಗಳ ಕೆಲಸಗಳನ್ನು ನಿರ್ವಹಣೆ ಮಾಡಬೇಕಾಗಿರುತ್ತದೆ. ಈ ಸಂಬಂಧ ಆ ಭಾಗದ ಸಂಸದರು/ವಿಧಾನಸಭಾ ಸದಸ್ಯರುಗಳು ದೇಣಿಗೆ ನೀಡಲು ಸಿದ್ಧರಾಗಿದ್ದಾರೆಂದು ಮಾನ್ಯ ಕುಲಪತಿಗಳು ತಿಳಿಸಿದರು.

ಕುಲಪತಿಗಳು ಕುಲಸಚಿವರು

ಕರಾಮುವಿ ಪ್ರಾದೇಶಿಕ ಕೇಂದ್ರಗಳ ಕಾಮಗಾರಿ ನಿರ್ಮಾಣ ಸಂಬಂಧ ವಿಶ್ವವಿದ್ಯಾನಿಲಯದಿಂದ ಯಾವುದೇ ಹಣ ಪಡೆಯದೇ ಕಲ್ಯಾಣ ಕರ್ನಾಟಕ ಭಾಗದಿಂದ ಉನ್ನತ ಶಿಕ್ಷಣಕ್ಕೆ ಬರತಕ್ಕ ಹಣಕಾಸಿನ ಸೌಲಭ್ಯಗಳನ್ನು ಬಳಸಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳುವುದು ಸೂಕ್ತವೆಂದು ಸದಸ್ಯರುಗಳು ತಿಳಿಸಿದರು.

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರತಿ ಸದಸ್ಯರು ತಮ್ಮಗಳ ಅಭಿಪ್ರಾಯವನ್ನು ಸೂಚಿಸಲು ಮಾನ್ಯ ಕುಲಪತಿಗಳು ತಿಳಿಸಿದರು.

ಸದಸ್ಯರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ ಕರಾಮುವಿಯಿಂದ ದೂರ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಉನ್ನತ ಶಿಕ್ಷಣವನ್ನು ನೀಡುತ್ತಿರುವುದರಿಂದ ಸರ್ಕಾರದ ಪದವಿ ಪೂರ್ವ ಕಾಲೇಜುಗಳಿದ್ದು, ಅವುಗಳನ್ನು ಸಮಗ್ರವಾಗಿ ಉಪಯೋಗಿಸಿಕೊಳ್ಳಲು ಅನುವಾಗುವಂತೆ ಸರ್ಕಾರಕ್ಕೆ ಪತ್ರ ಬರೆಯಬೇಕೆಂದು ತಿಳಿಸಿದರು.

ಮುಂದುವರೆದಂತೆ, ಈ ವಿಷಯದ ಬಗ್ಗೆ ಸಂಬಂಧಪಟ್ಟ ಸಚಿವರೊಂದಿಗೆ ವ್ಯವಸ್ಥಾಪನ ಮಂಡಳಿ ಸಭೆಯನ್ನು ಹಮ್ಮಿಕೊಳ್ಳುವುದರಿಂದ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಅನುಕೂಲವಾಗುತ್ತದೆಂದು ತಿಳಿಸಿದರು.

ಈ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ, ಬೆಂಗಳೂರಿನ "ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು" ಇಲ್ಲಿ ಸಭೆಯನ್ನು ಹಮ್ಮಿಕೊಳ್ಳಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಸದಸ್ಯರಾದ ಡಾ. ಬಿ.ಜಿ. ಪಾಟೀಲ್‌ರವರು ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ವಿದ್ಯಾಭ್ಯಾಸದಿಂದ ವಂಚಿತರಾದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ನೀಡಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ಕಲಬುರ್ಗಿಯಲ್ಲಿ ಸ್ಥಾಪನೆ ಮಾಡುವುದು ಸೂಕ್ತವೆಂದು ತಿಳಿಸಿದರು.

ಸದಸ್ಯರಾದ ಶ್ರೀ. ರಮೇಶ್ ಗುಬ್ಬೇವಾಡರವರು ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರವನ್ನು ವಿಜಯಪುರದಲ್ಲಿ ಸ್ಥಾಪನೆ ಮಾಡುವುದು ಸೂಕ್ತವೆಂದು ತಿಳಿಸಿದರು.

ಸದಸ್ಯರಾದ ಶ್ರೀಮತಿ ಮಾಲತಿ .ಟಿ ರವರು ಮಾತನಾಡಿ ಬೆಂಗಳೂರಿನ ವಿಶ್ವೇಶ್ವರ ನಗರದ ಬಡಾವಣೆಯಲ್ಲಿ ಕರಾಮುವಿ ಪ್ರಾದೇಶಿಕ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಜಾಗ ಲಭ್ಯವಿದೆಯೇ ಎಂದು ಕೇಳಿದರು.

ಉಳಿದ ಸದಸ್ಯರುಗಳಾದ ಶ್ರೀ. ಕೆ. ಹರೀಶ್ ಗೌಡ, ಶ್ರೀ. ಡಿ. ರವಿಶಂಕರ್, ಡಾ. ಮಹೇಶ್ .ಎಸ್, ಶ್ರೀ. ಮಂಜು .ಆರ್ ಮತ್ತು ಶ್ರೀಮತಿ.ಪ್ರಾಚಿಗೌಡರವರುಗಳು ಮಾತನಾಡಿ ಕರಾಮುವಿಗೆ ಸರ್ಕಾರದಿಂದ ಯಾವುದೇ ಅನುದಾನವಿಲ್ಲದೆ, ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದಿಂದ ವಿಶ್ವವಿದ್ಯಾನಿಲಯ ಮುಂದುವರೆಯುತ್ತಿರುವುದರಿಂದ ವಿಶ್ವವಿದ್ಯಾನಿಲಯದಿಂದ ಪ್ರಾದೇಶಿಕ ಕೇಂದ್ರಗಳ ನಿರ್ಮಾಣ ಕಾರ್ಯಗಳಿಂದ ವಿಶ್ವವಿದ್ಯಾನಿಲಯದಿಂದ ಯಾವುದೇ ಹಣ ವ್ಯಯ ಮಾಡಬಾರದು, ಸರ್ಕಾರದಿಂದ ಉನ್ನತ ಶಿಕ್ಷಣ ಬೆಳವಣಿಗೆಗೆ ಅನುಕೂಲವಾಗುವಂತೆ, ಅನುದಾನ ಆಯಾ ಭಾಗದ ಸಂಸದರು/ವಿಧಾನಸಭಾ ಸದಸ್ಯರು/ವಿಧಾನಪರಿಷತ್ತಿನ ಸದಸ್ಯರುಗಳಿಂದ ದೇಣಿಗೆ ಪಡೆದು ಪ್ರಾದೇಶಿಕ ಕೇಂದ್ರಗಳ ನಿರ್ಮಾಣ ಕಾರ್ಯ ಕೈಗೊಳ್ಳುವುದು ಸೂಕ್ತವೆಂರು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿನಲ್ಲಿ ಈಗಾಗಲೇ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರ ನಿರ್ಮಾಣ ಸಂಬಂಧ ಸರ್ಕಾರದಿಂದ ಉಚಿತವಾಗಿ 2 ಎಕರೆ ಜಮೀನನ್ನು ನೀಡಿದ್ದು, ಸದರಿ ಜಮೀನಿನಲ್ಲಿ ಕರಾಮುವಿಯ ಸುಸಜ್ಜಿತ ಪ್ರಾದೇಶಿಕ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಸಂಪರ್ಕ ಕಾರ್ಯಕ್ರಮಗಳ ತರಗತಿಗಳನ್ನು ನಡೆಸುವುದು, ಪರೀಕ್ಷೆಗಳನ್ನು ನಡೆಸುವುದು, ಗ್ರಂಥಾಲಯ ಮತ್ತು ಸಭೆಗಳನ್ನು ನಡೆಸುವುದಕ್ಕೆ ಸಭಾಂಗಣಗಳನ್ನು ಒಳಗೊಂಡಂತೆ ಸುಸಜ್ಜಿತ ಕಟ್ಟಡ ನಿರ್ಮಾಣ ಕೈಗೊಳ್ಳಬೇಕಾಗಿರುತ್ತದೆಂದು ಸಭೆಗೆ ತಿಳಿಸಿದರು. ಇದಕ್ಕೆ ಶ್ರೀ. ದರ್ಶನಾಪುರ್ ರವರು 7 ಕೋಟಿ ರೂಪಾಯಿಗಳನ್ನು ನೀಡಲು ಒಪ್ಪಿದ್ದು, ಶ್ರೀ. ಅರ್ಜುನ್ ಸಿಂಗ್ ರವರು ಕಟ್ಟಡ ಕಾಮಗಾರಿ ಚಾಲ್ತಿಯಾದಾಗ ನಾವು ಸಹ ದೇಣಿಗೆ ನೀಡಲಾಗುವುದೆಂದು ತಿಳಿಸಿತ್ತಾರೆಂದು ಸಭೆಯ ಗಮನಕ್ಕೆ ತಂದರು.

ಕುಲಪತಿಗಳು ಕುಲಸಚಿವರು

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕಲ್ಯಾಣ ಕರ್ನಾಟಕ ಭಾಗದ ಯಾದಿಗಿರಿಯಲ್ಲಿ ಸರ್ಕಾರದಿಂದ ಉಚಿತವಾಗಿ ನೀಡಿರುವ 2 ಎಕರೆ ಜಮೀನಿನಲ್ಲಿ ಕರಾಮುವಿಯ ಪ್ರಾದೇಶಿಕ ಕೇಂದ್ರ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಈಗಾಗಲೇ ಶ್ರೀ. ದರ್ಶಾನಾಪುರ್ ರವರು 7 ಕೋಟಿ ರೂಪಾಯಿಗಳನ್ನು ನೀಡಲು ಒಪ್ಪಿರುವುದರಿಂದ ಹಾಗೂ ಶ್ರೀ. ಅರ್ಜುನ್ ಸಿಂಗ್ ರವರು ಸಹ ಕರಾಮುವಿ ಪ್ರಾದೇಶಿಕ ಕಟ್ಟಡ ಕಾಮಗಾರಿ ಪ್ರಾರಂಭವಾದಾಗ ಅವರೂ ಸಹ ದೇಣಿಗೆ ನೀಡಲು ಒಪ್ಪಿರುವುದಾಗಿ ಮಾನ್ಯ ಕುಲಪತಿಗಳು ತಿಳಿಸಿದ್ದು ಹಾಗೂ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯವರು ಆ ಭಾಗದ ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ನೀಡುವ ಅನುದಾನವನ್ನು ಬಳಸಿಕೊಂಡು ಯಾದಗಿರ್ ಪ್ರಾದೇಶಿಕ ಕೇಂದ್ರ ನಿರ್ಮಾಣ ಕಾರ್ಯ ಕೈಗೊಳ್ಳುವುದು. ಈ ಸಂಬಂಧ ಕರಾಮುವಿಯಿಂದ ಯಾವುದೇ ಆರ್ಥಿಕ ಸಂಪನ್ಮೂಲಗಳನ್ನು ಪಡೆಯದೇ ಕಲ್ಯಾಣ ಕರ್ನಾಟಕ ಭಾಗದ ಯಾದಗಿರಿಯಲ್ಲಿ ಕರಾಮುವಿಯ ಸುಸಜ್ಜಿತ ಪ್ರಾದೇಶಿಕ ಕೇಂದ್ರ ಕಟ್ಟಡ ಕಾಮಗಾರಿಗಳನ್ನು ಕೈಗೊಳ್ಳಲು ಸಭೆಯು ತೀರ್ಮಾನಿಸಿತು.

2) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ದಿನಾಂಕ: 09-06-2025 ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 183ನೇ ಸಾಮಾನ್ಯ ಸಭೆಯ ತೀರ್ಮಾನಗಳಲ್ಲಿ ವಿಷಯ ಸಂಖ್ಯೆ:183.10 ಮತ್ತು 183.11ರ ವಿಷಯಕ್ಕೆ ಸಂಬಂಧಪಟ್ಟಂತೆ, ಈ ಮೇಲ್ಕಂಡ ತೀರ್ಮಾನದ ರೀತ್ಯಾ ಕ್ರಮವಹಿಸಲು ಇಂದಿನ ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಉಳಿದಂತಹ ವಿಷಯಗಳ ತೀರ್ಮಾನಗಳ ಬಗ್ಗೆ ಕೈಗೊಂಡ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

#####

**ವಿಷಯ ಸಂಖ್ಯೆ: 184.02**

**ವಿಷಯ: 66ನೇ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.**

– * –

ದಿನಾಂಕ: 09-06-2025ರಂದು ನಡೆದ 66ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ತೀರ್ಮಾನದ ನಡಾವಳಿಯನ್ನು ಮುಂಬರುವ ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

*****

ವಿಷಯ ಸಂಖ್ಯೆ: 66.01ರ ವಿಷಯದ ಬಗ್ಗೆ ಭಾಷಾಂತರ ಅಧ್ಯಯನ ವಿಷಯಗಳಿಗೆ ಪಾಠ ಪ್ರವಚನ ಮಾಡಲು ಭಾರತೀಯ ಭಾಷಾ ಸಂಸ್ಥಾನ ಅಲ್ಲಿಂದಲೇ ಅಧ್ಯಾಪಕರನ್ನು ಕರೆಸಿ ಒಂದು ಗಂಟೆಯ ತರಗತಿಗಳಿಗೆ ರೂ. 500/-ಗಳ ಸಂಭಾವನೆಗಳನ್ನು ನೀಡಲಾಗುತ್ತದೆಂದು ಡೀನ್(ಶೈಕ್ಷಣಿಕ) ರವರು ಸಭೆಯ ಗಮನಕ್ಕೆ ತಂದರು.

**ವಿಷಯ ಸಂಖ್ಯೆ: 66.12ರ ವಿಷಯದ ಉಪಕುಲಸಚಿವರ ವಿಷಯ ಬಗ್ಗೆ ಚರ್ಚಿಸಲಾಯಿತು.**

ಈ ವಿಷಯದ ಬಗ್ಗೆ ಕುಲಸಚಿವರು ಮುಖ್ಯವಾಗಿ ಕ್ರಮವಹಿಸಬೇಕೆಂದು ಶ್ರೀ. ಕೆ ಹರೀಶ್ ಗೌಡರು ತಿಳಿಸಿದರು ಹಾಗೂ ನೌಕರರುಗಳಿಗೆ ಸಿಗಬೇಕಾದ ಮುಂಬಡ್ತಿಗಳನ್ನು ನೀಡಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಅರ್ಹರಿರುವವರಿಗೆ ಅವಕಾಶ ಕಲ್ಪಿಸಲಾಗುವುದೆಂದು ತಿಳಿಸಿದರು.

ಕುಲಪತಿಗಳು ಕುಲಸಚಿವರು

ಶ್ರೀ. ಕೆ ಹರೀಶ್ ಗೌಡರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಯಾವ ಹುದ್ದೆಗಳು ಖಾಲಿ ಇರುತ್ತದೆಂದು ಕೇಳಿದರು. ವಿಶ್ವವಿದ್ಯಾನಿಲಯದ ಖಾಯಂ ನೌಕರರುಗಳಾದ "ಡಿ" ಗ್ರೂಪ್ ನೌಕರರುಗಳಿಂದ ಉಪಕುಲಸಚಿವರು ಹುದ್ದೆಗಳವರೆಗೂ ಯಾವುದೇ ನೌಕರರಿಗೆ ತೊಂದರೆ ಆಗಬಾರದು ಹಾಗೂ ಅವರುಗಳಿಗೆ ಅನ್ಯಾಯವಾಗಬಾರದೆಂದು ತಿಳಿಸಿದರು.

ತೀರ್ಮಾನ:

1) **ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ಯಾವುದೇ ನೌಕರರುಗಳಿಗೆ ತೊಂದರೆಯಾಗದೆ ರೀತಿಯಲ್ಲಿ, ಅವರುಗಳಿಗೆ ಕಾಲ ಕಾಲಕ್ಕೆ ನೀಡಬೇಕಾಗಿರುವ ಸವಲತ್ತು ಹಾಗೂ ಬಡ್ತಿಗಳನ್ನು ನೀಡುವುದರಿಂದ ವಿಶ್ವವಿದ್ಯಾನಿಲಯದ ನೌಕರರುಗಳು ಉತ್ಸಾಹದಿಂದ ಕಾರ್ಯಗಳನ್ನು ನಿರ್ವಹಣೆ ಮಾಡುತ್ತಾರೆಂದು ತೀರ್ಮಾನಿಸಲಾಯಿತು.**

2) **ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಷಯ ಸಂಖ್ಯೆ: 66.12ರ ವಿಷಯಕ್ಕೆ ಈ ಮೇಲ್ಕಂಡ (1)ರ ರೀತ್ಯಾ ವ್ಯವಸ್ಥಾಪನ ಮಂಡಳಿಯು ನಿರ್ಣಯ ಕೈಗೊಳ್ಳಲಾಗಿದ್ದು, ಉಳಿದ ಶೈಕ್ಷಣಿಕ ಮಂಡಳಿ ಸಭೆಯ ವಿಷಯಗಳ ನಡಾವಳಿಯನ್ನು ಅನುಮೋದಿಸಲಾಯಿತು.**

#####

**ವಿಷಯ ಸಂಖ್ಯೆ: 184.03**

**ವಿಷಯ: 2013–14 ಮತ್ತು 2014–15ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದು ಪದವಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸದಿರುವ ಬಗೆಗೆ.**

– * –

ವಿಶ್ವವಿದ್ಯಾನಿಲಯದ ನಿಯಂತ್ರಕ ಸಂಸ್ಥೆಯಾದ UGC-New Delhiಯು ದಿನಾಂಕ: 16–06–2015 ರಂದು ವಿಶ್ವವಿದ್ಯಾನಿಲಯಕ್ಕೆ 2013–14 ಮತ್ತು 2014–15ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಮಾನ್ಯತೆ ಇರುವುದಿಲ್ಲ ಎಂಬುದಾಗಿ ಸಾರ್ವಜನಿಕ ಪ್ರಕಟಣೆ ಹೊರಡಿಸಿರುತ್ತದೆ. ಈ ಸಂಬಂಧ ಈಗಾಗಲೇ ಸದರಿ ಸಾಲಿನ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ಪದವಿ ಪ್ರಮಾಣ ಪತ್ರ, ನೈಜತೆ ಪ್ರಮಾಣ ಪತ್ರ, ವಲಸೆ ಪ್ರಮಾಣ ಪತ್ರ ಇವುಗಳನ್ನು ವಿತರಿಸುತ್ತಿದ್ದು, ಈ ಸಾಲಿನ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲು ಘಟಿಕೋತ್ಸವ ಸಮಾರಂಭ ನಡೆಸಿರುವುದಿಲ್ಲ, ಈ ನಿಟ್ಟಿನಲ್ಲಿ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿರುವುದಿಲ್ಲ. ದಿನಾಂಕ: 03–08–2022ರಂದು ಮಾನ್ಯ ಉಚ್ಚ ನ್ಯಾಯಾಲಯ, ವಿಭಾಗೀಯ ಪೀಠ, ಬೆಂಗಳೂರು ಇವರು ಈ ಕೆಳಗಿನಂತೆ ನಿರ್ದೇಶನ ನೀಡಿರುತ್ತಾರೆ.

i. The appeals are allowed.
ii. The directions issued to the UGC to conduct inspections and to grant approval to the courses conducted by the KSOU during the years 2013-14 and 2014-15, shall stand vacated.
iii. However, it is made clear that this judgment will not affect the directions issued to the KSOU and the orders already passed by the State Government.

ಮೇಲ್ಕಂಡ ಉಚ್ಚ ನ್ಯಾಯಾಲಯ, ವಿಭಾಗೀಯ ಪೀಠದ ನಿರ್ದೇಶನವನ್ನು ಪಾಲಿಸುವ ಸಂಬಂಧವಾಗಿ ಈಗಾಗಲೇ ದಿನಾಂಕ: 14–02–2025ರಂದು ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಅನುಮತಿಗಾಗಿ ಪತ್ರ ಬರೆದಿದ್ದು, ಸದರಿ ಪತ್ರದ ಪ್ರತಿಯನ್ನು ಈ ಕೆಳಕಂಡವರುಗಳಿಗೂ ಸಹ ಕಳುಹಿಸಲಾಗಿರುತ್ತದೆ.

**ಕುಲಪತಿಗಳು** **ಕುಲಸಚಿವರು**

1. Respected Minister for Higher Education and Pro-Chancellor of KSOU, Govt. of Karnataka, Bengaluru.
2. The Chief Secretary, Govt. of Karnataka, Bengaluru.
3. The Principal Secretary, Higher Education Department, Govt. of Karnataka, Bengaluru.
4. The Secretary, University Grant Commission, New Delhi.
5. The Joint Secretary, Distance Education Council (DEB), UGC, New Delhi.

ಈ ಎಲ್ಲಾ ಅಂಶಗಳನ್ನು ದಿನಾಂಕ: 30-08-2025ರಂದು ನಡೆಯುವ ವ್ಯವಸ್ಥಾಪನಾ ಮಂಡಳಿಯಲ್ಲಿ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

*****

ಈ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಮಾತನಾಡಿ 2013-14 ಮತ್ತು 2014-15ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಇನ್‌ಹೌಸ್ ಕಾರ್ಯಕ್ರಮಗಳಿಗೆ ಮಾನ್ಯತೆ ರದ್ದಾಗಿದ್ದು, ಆ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದಲ್ಲಿ ನಡೆಸುತ್ತಿದ್ದ ಕಾರ್ಯಕ್ರಮಗಳಿಗೆ ಯು.ಜಿ.ಸಿಯು ಮಾನ್ಯತೆಯನ್ನು ರದ್ದುಪಡಿಸಲಾಗಿದ್ದು, 2015 ಯುಜಿಸಿಯು ಸಾರ್ವಜನಿಕ ಸೂಚನೆಯನ್ನು ಸಹ ಹೊರಡಿಸಿರುತ್ತದೆ. ಈ ಸಂದರ್ಭದಲ್ಲಿ ಪ್ರೊ. ಎಂ.ಜಿ. ಕೃಷ್ಣನ್‌ರವರು ಕುಲಪತಿಗಳಾಗಿದ್ದರು. 2013-14 ಮತ್ತು 2014-15ನೇ ಶೈಕ್ಷಣಿಕ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಇನ್‌ಹೌಸ್ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದಿದ್ದು ವಿದ್ಯಾರ್ಥಿಗಳು ಮಾನ್ಯತೆ ಇಲ್ಲದ ಈ ವಿದ್ಯಾರ್ಥಿಗಳಿಗೆ ಅಂಕಪಟ್ಟಿ, ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರ, ಪದವಿ ಪ್ರಮಾಣ ಪತ್ರಗಳನ್ನು ನೀಡುತ್ತಿರಲಿಲ್ಲ. ಕೆಲವು ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ ಅದರ ತೀರ್ಮಾನಗಳಲ್ಲಿ ಈ ಸಾಲಿನ ವಿದ್ಯಾರ್ಥಿಗಳಿಗೆ ಉತ್ತೀರ್ಣರಾಗಿದ್ದಲ್ಲಿ ಅವರುಗಳಿಗೆ ಅಂಕಪಟ್ಟಿ ಮತ್ತು ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರಗಳನ್ನು ನೀಡಲು ತೀರ್ಮಾನಿಸಿದ್ದು, ಅದರಂತೆ ಅಂತಹ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ತಾತ್ಕಾಲಿಕ ತೇರ್ಗಡೆ ಪ್ರಮಾಣ ಪತ್ರಗಳನ್ನು ನೀಡಲಾಗಿದೆ. ಸದರಿ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ಇದುವರೆವಿಗೂ ನೀಡಿರುವುದಿಲ್ಲ, ಈಗಾಗಲೇ ಈ ಮೇಲ್ಕಂಡ ಸಾಲಿನಲ್ಲಿ ಪ್ರವೇಶಾತಿ ಪಡೆದು ಪದವಿ ಪೂರ್ಣಗೊಳಿಸಿರುವ ಒಟ್ಟು 94,000 ವಿದ್ಯಾರ್ಥಿಗಳಿದ್ದಾರೆಂದು ಸಭೆಗೆ ತಿಳಿಸಿದರು.

ಶ್ರೀ. ಕೆ. ಹರೀಶ್ ಗೌಡರು ಮಾತನಾಡಿ ಕೋರ್ಟ್ ತೀರ್ಮಾನದ ರೀತ್ಯಾ ಆ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ನೀಡಬೇಕೆಂದು ನನ್ನ ಅಭಿಪ್ರಾಯವಾಗಿರುತ್ತದೆಂದು ತಿಳಿಸಿದರು.

ಶ್ರೀ. ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ ಈ ಬಗ್ಗೆ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಮಾನದ ಪ್ರತಿಯೊಂದಿಗೆ ಸರ್ಕಾರಕ್ಕೆ ಪತ್ರ ಬರೆದು ಮುಂದಿನ ಕ್ರಮ ವಹಿಸುವುದು ಸೂಕ್ತವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸಂಬಂಧಪಟ್ಟ ಶಿಕ್ಷಣ ಸಚಿವರ ಸಮ್ಮುಖದಲ್ಲಿ ಚರ್ಚಿಸಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನಲ್ಲಿ ಸಭೆ ನಡೆಸಿ ತೀರ್ಮಾನ ಕೈಗೊಳ್ಳುವುದು ಸೂಕ್ತವಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಹಲವು ಪತ್ರಗಳನ್ನು ಕಳುಹಿಸಲಾಗಿದೆ ಎಂದು ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಸಚಿವರ ಸಮ್ಮುಖದಲ್ಲಿ ವಿಶ್ವವಿದ್ಯಾನಿಲಯದ ವ್ಯವಸ್ಥಾಪನ ಮಂಡಳಿ ಸದಸ್ಯರುಗಳನ್ನು ಒಳಗೊಂಡಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಇಲ್ಲಿ ಸಭೆಯನ್ನು ಆಯೋಜಿಸಿ, ಅಲ್ಲಿಯ ತೀರ್ಮಾನಗಳ ರೀತ್ಯಾ ಮುಂದಿನ ಕ್ರಮವಹಿಸಬೇಕೆಂದು ತೀರ್ಮಾನಿಸಲಾಯಿತು.**

#####

ಕುಲಪತಿಗಳು　　　　　　　　　　　　　　　　ಕುಲಸಚಿವರು

**ವಿಷಯ ಸಂಖ್ಯೆ: 184.04**

**ವಿಷಯ: ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡೆರ್ ಆಹ್ವಾನಿಸಿ ದರ ನಿಗಧಿಪಡಿಸಿರುವ ಬಗೆಗೆ.**

– * –

ದಿನಾಂಕ: 18.06.2024 ರಂದು ನಡೆದ 179ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ SLM ಅಧ್ಯಯನ ಸಾಮಗ್ರಿಗಳ ಮುದ್ರಣ ಸಂಬಂಧ ಪ್ರಥಮ, ದ್ವಿತೀಯ ಮತ್ತು ತೃತೀಯ ಬಿ.ಎ/ಬಿ.ಕಾಂ. ಹಾಗೂ CBCSನ UG, PG ಕೋರ್ಸ್‌ಗಳ ಪ್ರಥಮ, ದ್ವಿತೀಯ ಹಾಗೂ ತೃತೀಯ ಸೆಮಿಸ್ಟರ್‌ಗಳ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ವಿಷಯವನ್ನು ಮಂಡಿಸಿ ರೂ. 16.00 ಕೋಟಿಗಳಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ ಪಡೆಯಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ವ್ಯವಸ್ಥಾಪನಾ ಮಂಡಳಿಯ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ಮೊದಲ ಹಂತದಲ್ಲಿ ರೂ. 8.60 ಕೋಟಿ ರೂಪಾಯಿಗಳಲ್ಲಿ NON-CBCSನ ಪ್ರಥಮ, ದ್ವಿತೀಯ ಮತ್ತು ತೃತೀಯ ಬಿ.ಎ/ಬಿ.ಕಾಂ., ವಿಷಯಗಳ ಹಾಗೂ CBCSನ ಪ್ರಥಮ ಸೆಮಿಸ್ಟರ್ ವಿಷಯಗಳ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲು ಮಾನ್ಯ ಕುಲಪತಿಗಳು ಅನುಮೋದನೆಯಂತೆ ಕ್ರಮವಹಿಸಲಾಗಿರುತ್ತದೆ.

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ KTPP ನಿಯಾಮಾನುಸಾರ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ ದಿನಾಂಕ: 03.12.2024ರಂದು ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಸದರಿ ಟೆಂಡರ್ ದಾಖಲಾತಿಗಳನ್ನು ಪರಿಶೀಲಿಸುವ ಸಂಬಂಧ ದಿನಾಂಕ: 31.07.2024ರಂದು ತಾಂತ್ರಿಕ ತಜ್ಞರನ್ನೊಳಗೊಂಡ **'ಟೆಂಡರ್ ರಚನಾ, ಸಲಹಾ ಮತ್ತು ಪರೀಶೀಲನಾ'** ಸಮಿತಿಯನ್ನು ರಚಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

ದಿನಾಂಕ: 29.01.2025ರಂದು ತಾಂತ್ರಿಕ ಬಿಡ್‌ಅನ್ನು ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ ತೆರೆಯಲಾಯಿತು. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪೋರ್ಟ್‌ಲ್‌ನಲ್ಲಿ 06 ಮಂದಿ ಮುದ್ರಕರುಗಳು ಭಾಗವಹಿಸಿದ್ದರು. ಎಲ್ಲಾ ಮುದ್ರಕರುಗಳು ಸಲ್ಲಿಸಿರುವ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ನಿಯಮಾನುಸಾರ ಪರಿಶೀಲಿಸಿ, ದಿನಾಂಕ: 25.02.2025ರಂದು ನಡೆದ 'ಟೆಂಡರ್ ರಚನಾ, ಸಲಹಾ ಮತ್ತು ಪರಿಶೀಲನಾ ಸಮಿತಿ' ಸಭೆಯಲ್ಲಿ ಅರ್ಹ ಮುದ್ರಕರುಗಳನ್ನು ಆಯ್ಕೆ ಮಾಡಲು ದಾಖಲಾತಿಗಳನ್ನು ಮಂಡಿಸಲಾಯಿತು.

1. **ಮೆ|| ಅಭಿಮಾನಿ ಪಬ್ಲಿಕೇಷನ್ಸ್, ಬೆಂಗಳೂರು:**
    - ಇವರು ತಾಂತ್ರಿಕ ಬಿಡ್‌ನ Annexure-1 ರಲ್ಲಿ ಹೆಚ್ಚುವರಿ ವಿಷಯಗಳನ್ನು ಸೇರಿಸಿ ತಿದ್ದುಪಡಿ ಮಾಡಿ ಸಲ್ಲಿಸಿರುತ್ತಾರೆ.
    - ಜೊತೆಯಲ್ಲಿ ಸಲ್ಲಿಸಿರುವ ಕಾರ್ಯಾದೇಶಗಳಲ್ಲಿ SLM ಮುದ್ರಿಸಿರುವ ಬಗ್ಗೆ ನಮೂದಾಗಿರುವುದಿಲ್ಲ.

    ಮೇಲ್ಕಂಡ ಕಾರಣಗಳಿಂದಾಗಿ ಸದರಿ ಮುದ್ರಕರ ತಾಂತ್ರಿಕ ಬಿಡ್‌ಅನ್ನು ತಿರಸ್ಕರಿಸಲಾಗಿರುತ್ತದೆ.

2. **ಮೆ|| ಹರಿಹಂತ್ ಆಫ್‌ಸೆಟ್, ನವದೆಹಲಿ:**
    - ಇವರು ಸಲ್ಲಿಸಿರುವ ಕಾರ್ಯಾದೇಶಗಳಲ್ಲಿ SLM ಮುದ್ರಿಸಿರುವ ಬಗ್ಗೆ ನಮೂದಾಗಿರುವುದಿಲ್ಲ.
    - ಹೊರ ರಾಜ್ಯದ ಮುದ್ರಕರುಗಳು ನಮ್ಮ ರಾಜ್ಯದಲ್ಲಿ ಶಾಖೆಯನ್ನು ಹೊಂದಿರಬೇಕು ಎಂಬ ನಿಯಮವಿರುತ್ತದೆ. ಆದರೆ ಸದರಿಯವರು ರಾಜ್ಯದಲ್ಲಿ ಶಾಖೆಯನ್ನು ಹೊಂದಿರುವುದಿಲ್ಲ.
    - ಬ್ಲಾಕ್‌ಲಿಸ್ಟ್‌ಗೆ ಸಂಬಂಧಿಸಿದಂತೆ ಟೆಂಡರ್ ಆಹ್ವಾನಕ್ಕೂ ಹಿಂದಿನ ದಿನಾಂಕದ Affidavit ಸಲ್ಲಿಸಿರುತ್ತಾರೆ.

**ಮೇಲ್ಕಂಡ ಕಾರಣಗಳಿಂದಾಗಿ ಸದರಿ ಮುದ್ರಕರ ತಾಂತ್ರಿಕ ಬಿಡ್‌ಅನ್ನು ತಿರಸ್ಕರಿಸಲಾಗಿರುತ್ತದೆ.**

**ಕುಲಪತಿಗಳು** | **ಕುಲಸಚಿವರು**

3. **ಮೆ॥ ಡಾಟಾಕಾನ್ ಟೆಕ್ನಾಲಜೀಸ್ ಲಿ., ಬೆಂಗಳೂರು:**

- ಇವರು Annexure-1 ಅನ್ನು ವಿಶ್ವವಿದ್ಯಾನಿಲಯವು ಸೂಚಿಸಿದಂತೆ ಸಲ್ಲಿಸಿರುವುದಿಲ್ಲ ಹಾಗೂ ಸಲ್ಲಿಸಿರುವ ಕಾರ್ಯಾದೇಶಗಳಲ್ಲಿ SLM ಮುದ್ರಿಸಿರುವ ಬಗ್ಗೆ ನಮೂದಾಗಿರುವುದಿಲ್ಲ.
- ನ್ಯಾಷನಲ್ ಬ್ಯಾಂಕ್‌ನಿಂದ ಸಾಲ್ವೆನ್ಸಿ ಸರ್ಟಿಫಿಕೇಟ್ ಪಡೆದು ಸಲ್ಲಿಸಿರುವುದಿಲ್ಲ.
- ಬ್ಲಾಕ್‌ಲಿಸ್ಟ್‌ಗೆ ಸಂಬಂಧಿಸಿದಂತೆ ಟೆಂಡರ್ ಆಹ್ವಾನಕ್ಕೂ ಹಿಂದಿನ ದಿನಾಂಕದ Affidavit ಅನ್ನು ಸಲ್ಲಿಸಿರುತ್ತಾರೆ.

**ಮೇಲ್ಕಂಡ ಕಾರಣಗಳಿಂದಾಗಿ ಸದರಿ ಮುದ್ರಕರ ತಾಂತ್ರಿಕ ಬಿಡ್‌ಅನ್ನು ತಿರಸ್ಕರಿಸಲಾಗಿರುತ್ತದೆ.**

4. **ಮೆ॥ ವೆಂಕಟೇಶ್ವರ ಎಂಟರ್‌ಪ್ರೈಸಸ್, ಬೆಂಗಳೂರು:**

- ಇವರು Annexure-1 ಅನ್ನು ವಿಶ್ವವಿದ್ಯಾನಿಲಯ ಸೂಚಿಸಿದಂತೆ ಸಲ್ಲಿಸಿರುವುದಿಲ್ಲ.
- ಸಲ್ಲಿಸಿರುವ ಕಾರ್ಯದೇಶಗಳಲ್ಲಿ SLM ಮುದ್ರಿಸಿರುವ ಬಗ್ಗೆ ನಮೂದಾಗಿರುವುದಿಲ್ಲ.
- Nationalized Bank ನಿಂದ ಸಾಲ್ವೆನ್ಸಿ ಸರ್ಟಿಫಿಕೇಟ್ ಸಲ್ಲಿಸಿರುವುದಿಲ್ಲ.

**ಮೇಲ್ಕಂಡ ಕಾರಣಗಳಿಂದಾಗಿ ಸದರಿ ಮುದ್ರಕರ ತಾಂತ್ರಿಕ ಬಿಡ್‌ಅನ್ನು ತಿರಸ್ಕರಿಸಲಾಗಿರುತ್ತದೆ.**

5. **ಮೆ॥ ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು:**

- ಇವರು ವಿಶ್ವವಿದ್ಯಾನಿಲಯದ ನಿಯಮ ಮತ್ತು ಷರತ್ತುಗಳಂತೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದು, ಸಮಿತಿಯ ತಾಂತ್ರಿಕ ಬಿಡ್‌ನಲ್ಲಿ ಅರ್ಹರೆಂದು ಮುಂದಿನ ಹಂತದ ಪ್ರಕ್ರಿಯೆಗೆ ಶಿಫಾರಸ್ಸು ಮಾಡಲಾಗಿರುತ್ತದೆ.

6. **ಮೆ॥ ಮಣಿಪಾಲ್ ಟೆಕ್ನಾಲಜೀಸ್ ಲಿ., ಮಣಿಪಾಲ್:**

- ಇವರು ವಿಶ್ವವಿದ್ಯಾನಿಲಯದ ನಿಯಮ ಮತ್ತು ಷರತ್ತುಗಳಂತೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದು, ಸಮಿತಿಯ ತಾಂತ್ರಿಕ ಬಿಡ್‌ನಲ್ಲಿ ಅರ್ಹರೆಂದು ಮುಂದಿನ ಹಂತದ ಪ್ರಕ್ರಿಯೆಗೆ ಶಿಫಾರಸ್ಸು ಮಾಡಲಾಗಿರುತ್ತದೆ.

ಮೇಲ್ಕಂಡ ಎಲ್ಲಾ 06 (ಆರು) ಮಂದಿ ಮುದ್ರಕರುಗಳು ಟೆಂಡರ್‌ನಲ್ಲಿ ಸಲ್ಲಿಸಿರುವ ತಾಂತ್ರಿಕ ಬಿಡ್ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ 'ಟೆಂಡರ್ ರಚನಾ, ಸಲಹಾ ಮತ್ತು ಪರೀಶಿಲನಾ ಸಮಿತಿ' ಸಭೆಯು, ನಿಯಮಾನುಸಾರ ದಾಖಲಾತಿಗಳನ್ನು ಸಲ್ಲಿಸಿದ ಕಾರಣ, ಕ್ರಮ ಸಂಖ್ಯೆ (1) ರಿಂದ (4)ರವರೆಗಿನ ನಾಲ್ವರು ಮುದ್ರಕರುಗಳ ಟೆಕ್ನಿಕಲ್ ಬಿಡ್‌ಅನ್ನು ತಿರಸ್ಕರಿಸಿ, ವಿಶ್ವವಿದ್ಯಾನಿಲಯದ ನಿಯಮ ಮತ್ತು ಷರತ್ತುಗಳನ್ವಯ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದ ಕ್ರಮ ಸಂಖ್ಯೆ (5) ಮತ್ತು (6)ರ ಇಬ್ಬರು ಮುದ್ರಕರುಗಳನ್ನು ಮುಂದಿನ ಪ್ರಕ್ರಿಯೆಯಾದ ಫೈನಾನ್ಷಿಯಲ್ ಬಿಡ್‌ಅನ್ನು ತೆರೆಯಲು ಒಮ್ಮತದಿಂದ ಸಭೆಯು ಶಿಫಾರಸ್ಸು ಮಾಡಿತು (ಪ್ರತಿ ಲಗತ್ತಿಸಿದೆ).

ಅದರಂತೆ, ಮೆ॥ ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು, ಮತ್ತು ಮೆ॥ ಮಣಿಪಾಲ್ ಟೆಕ್ನಾಲಜೀಸ್ ಲಿ., ಮಣಿಪಾಲ್, ಇವರುಗಳ ಫೈನಾನ್ಷಿಯಲ್ ಬಿಡ್‌ಅನ್ನು ದಿನಾಂಕ:04-03-2025 ರಂದು ಶಾಸನಬದ್ಧ ಅಧಿಕಾರಿಗಳ ಸಮಕ್ಷಮದಲ್ಲಿ ತೆರೆಯಲಾಗಿರುತ್ತದೆ. ಇವರುಗಳಲ್ಲಿ, **ಮೆ॥ ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು,** ಇವರು L-1 ಬಿಡ್‌ದಾರರಾಗಿ ಆಯ್ಕೆಯಾಗಿರುತ್ತಾರೆ. ಈ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 11-03-2025 ರಂದು 'ದರಸಂಧಾನ' ಸಭೆಯನ್ನು ನಡೆಸಲಾಯಿತು. ಸದರಿ ಸಭೆಯಲ್ಲಿ ಮುದ್ರಕರು ದರಗಳನ್ನು ಪರಿಷ್ಕರಿಸಿ ಒಪ್ಪಿಗೆ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಮುದ್ರಕರು ಸಲ್ಲಿಸಿರುವ ರಿಯಾಯಿತಿ ನಂತರ ನಿಗಧಿಪಡಿಸಿದ ದರಗಳನ್ನು ಹಾಗೂ 'ದರಸಂಧಾನ ಸಭೆ'ಯ ನಡವಳಿಯನ್ನು ಅಂಗೀಕರಿಸಿ ಮುಂದಿನ ಮುದ್ರಣ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳುವ ಸಂಬಂಧ ಮುಂಬರುವ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಿ ಅಡಳಿತಾತ್ಮಕ ಅನುಮೋದನೆಯೊಂದಿಗೆ ಕ್ರಮವಹಿಸಲು ಶಿಫಾರಸ್ಸು ಮಾಡಲಾಗಿರುತ್ತದೆ.

**ಕುಲಪತಿಗಳು** **ಕುಲಸಚಿವರು**

2025ನೇ ಸಾಲಿನ ಜುಲೈ ಆವೃತ್ತಿಯಲ್ಲಿ ಪ್ರವೇಶಾತಿ ಹೊಂದುವ ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿಗಳನ್ನು ವಿತರಿಸಬೇಕಾದ ಹಿನ್ನೆಲೆಯಲ್ಲಿ ತುರ್ತಾಗಿ ಮುದ್ರಣ ಕಾರ್ಯಕೈಗೊಳ್ಳುವ ನಿಟ್ಟಿನಲ್ಲಿ ಮಾನ್ಯ ಕುಲಪತಿಗಳು ವ್ಯವಸ್ಥಾಪನಾ ಮಂಡಳಿಯ ತೀರ್ಮಾನವನ್ನು ಕಾಯ್ದಿರಿಸಿ ದಿನಾಂಕ: 14-03-2025ರಂದು ದರ ಸಂಧಾನದ ನಂತರ ನಿಗಧಿಪಡಿಸಿದ ದರಗಳಲ್ಲಿ ಮುಂದಿನ ಮುದ್ರಣ ಪ್ರಕ್ರಿಯೆಯನ್ನು ಹಂತ ಹಂತವಾಗಿ ಕೈಗೊಳ್ಳಲು ಆದೇಶಿದ ಹಿನ್ನಲೆಯಲ್ಲಿ 'ಸ್ಥಾಯಿ ಆದೇಶ' ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಹಾಗೂ ಸದರಿ 'ಸ್ಥಾಯಿ ಆದೇಶ'ದ ದರಗಳಲ್ಲಿ ಮುದ್ರಣದ ಕಾರ್ಯದೇಶವನ್ನು ಹೊರಡಿಸಿ ಮುದ್ರಣ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ ಹಾಗೂ ಮುದ್ರಣಗೊಂಡು ಸರಬರಾಜಾಗಿರುವ ಅಧ್ಯಯನ ಸಾಮಗ್ರಿಗಳನ್ನು ದಾಸ್ತಾನಿಗೆ ತೆಗೆದುಕೊಂಡು ಪ್ರಸ್ತುತ ಪ್ರವೇಶಾತಿ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತಿದೆ. ಮುದ್ರಕರು ಸಲ್ಲಿಸಿರುವ ಮೊದಲ ಹಂತದ ಮುದ್ರಣದ ಒಟ್ಟು ಬಾಬ್ತು ರೂ. 2,97,09,376=00ಗಳಲ್ಲಿ ಶೇಕಡ 75ರ ಮೊತ್ತ ರೂ.2,22,82,032=00 (ರೂಪಾಯಿ ಎರಡು ಕೋಟಿ ಇಪ್ಪತ್ತೆರಡು ಲಕ್ಷದ ಎಂಭತ್ತೆರಡು ಸಾವಿರದ ಮೂವತ್ತೆರಡು)ಗಳನ್ನು ಹಾಗೂ ಎರಡನೇ ಹಂತದ ಮುದ್ರಣದ ಬಾಬ್ತು ರೂ. **2,70,04,408**-00 ಗಳಲ್ಲಿ ಶೇಕಡ 75ರ ಮೊತ್ತ ರೂ. **2,02,53,306=**00 (ರೂಪಾಯಿ ಎರಡು ಕೋಟಿ ಎರಡು ಲಕ್ಷದ ಐವತ್ಮೂರು ಸಾವಿರದ ಮೂರು ನೂರ ಆರು) ಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಮೇಲಿನ ಮೊತ್ತವನ್ನು ಪಾವತಿಸುವಂತೆ ಮಾನ್ಯ ಕುಲಪತಿಗಳು ಆದೇಶಿಸಿರುತ್ತಾರೆ ಹಾಗೂ ಉಳಿಕೆ 25ರಷ್ಟು ಮೊತ್ತವನ್ನು ಆಂತರಿಕ ಕಾಗದ ಗುಣಮಟ್ಟ ಪರೀಕ್ಷೆ ಸಮಿತಿಯ ಶಿಫಾರಸ್ಸನ್ನು ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಪಾವತಿಸಲಾಗುವುದು. ಹಾಗೂ ಮೂರನೇ ಹಂತದಲ್ಲಿ ಈಗಾಗಲೇ ಮುದ್ರಣದ ಕಾರ್ಯಾದೇಶ ಹೊರಡಿಸಲಾಗಿದ್ದು, ಮುದ್ರಿತ ಪ್ರತಿಗಳು ಬಂದ ನಂತರ ದಾಸ್ತಾನು ಪಡೆದು ಹುಂಡಿಗಳ ಪಾವತಿಗೆ ಕ್ರಮವಹಿಸುವ ಸಂಬಂಧ ಮೇಲಿನ ಎಲ್ಲಾ ಪ್ರಕ್ರಿಯೆಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ / ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

*****

ಮಾನ್ಯ ಕುಲಪತಿಗಳು ಮಾತನಾಡಿ, ದಿನಾಂಕ: 18.06.2024 ರಂದು ನಡೆದ 179ನೇ ವ್ಯವಸ್ಥಾಪನಾ ಮಂಡಳಿ ಸಭೆಯಲ್ಲಿ SLM ಅಧ್ಯಯನ ಸಾಮಗ್ರಿಗಳ ಮುದ್ರಣ ಸಂಬಂಧ ಪ್ರಥಮ, ದ್ವಿತೀಯ ಮತ್ತು ತೃತೀಯ ಬಿ.ಎ/ಬಿ.ಕಾಂ. ಹಾಗೂ CBCSನ UG, PG ಕೋರ್ಸ್‌ಗಳ ಪ್ರಥಮ, ದ್ವಿತೀಯ ಹಾಗೂ ತೃತೀಯ ಸೆಮಿಸ್ಟರ್‌ಗಳ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ವಿಷಯವನ್ನು ಮಂಡಿಸಿ ರೂ. 16.00 ಕೋಟಿಗಳಿಗೆ ಟೆಂಡರ್ ಆಹ್ವಾನಿಸಲು ಅನುಮೋದನೆ ಪಡೆಯಲಾಗಿದ್ದು, ಅದರಂತೆ ಕ್ರಮವಹಿಸಲಾಗಿದೆ. ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಂದರ್ಭದಲ್ಲೇ ಸಿದ್ಧಪಾಠಗಳನ್ನು ನೀಡುತ್ತಿದ್ದು, ಇದರಿಂದ ಪ್ರವೇಶಾತಿಯು ಹೆಚ್ಚಾಗುತ್ತದೆ. ಅಷ್ಟೇ ಅಲ್ಲದೇ ವಿದ್ಯಾರ್ಥಿಗಳು ಸಂತೋಷದಿಂದ ಇರುತ್ತಾರೆಂದು ತಿಳಿಸಿದರು.

ಶ್ರೀ. ಅಡಗೂರು ಹೆಚ್. ವಿಶ್ವನಾಥ್‌ರವರು ಮಾತನಾಡಿ, ಈಗಾಗಲೇ ಹೆಚ್ಚು ತಪ್ಪುಗಳಾಗಿದ್ದು, ಅವುಗಳಿಗೆ ಸಹಿ ಮಾಡಿರುತ್ತಾರೆಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಟೆಂಡರ್ ಕರೆದು ಕೆಲಸ ಕೊಡಬೇಕಾದರೆ ಎಲ್ಲಿಯೂ ವ್ಯತ್ಯಾಸಗಳು ಬರಬಾರದೆಂದು ಶ್ರೀ. ಕೆ. ಹರೀಶ್ ಗೌಡರು ಸಭೆಗೆ ತಿಳಿಸಿದರು.

ಕುಲಪತಿಗಳು ಕುಲಸಚಿವರು

ಮೊದಲ ಹಂತದಲ್ಲಿ ರೂ. 8.60 ಕೋಟಿ ರೂಪಾಯಿಗಳಲ್ಲಿ NON-CBCSನ ಪ್ರಥಮ, ದ್ವಿತೀಯ ಮತ್ತು ತೃತೀಯ ಬಿ.ಎ/ಬಿ.ಕಾಂ., ವಿಷಯಗಳ ಹಾಗೂ CBCSನ ಪ್ರಥಮ ಸೆಮಿಸ್ಟರ್ ವಿಷಯಗಳ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ ಕ್ರಮವಹಿಸಲಾಗಿದ್ದು, ಉಳಿದ ರೂ. 7.40 ಕೋಟಿ ರೂಪಾಯಿಗಳಿಗೆ ಹೊಸದಾಗಿ ಟೆಂಡರ್ ಕರೆಯಬೇಕೆಂದು ಸದಸ್ಯರುಗಳು ಅಭಿಪ್ರಾಯ ಸೂಚಿಸಿದರು.

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರಾಮುವಿಯ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಈಗಾಗಲೇ ಮೊದಲ ಹಂತದಲ್ಲಿ ರೂ. 8.60 ಕೋಟಿ ರೂಪಾಯಿಗಳ NON-CBCSನ ಪಠ್ಯಕ್ರಮಗಳನ್ನು ಪೂರೈಸಲು ಆದೇಶ ಹೊರಡಿಸಿ ಶೇ.75 ರಷ್ಟು ಹುಂಡಿ ಪಾವತಿಸಿದ್ದು, ಇದರಲ್ಲಿ ಬಾಕಿ ಉಳಿದಿರುವ ರೂ. 7.40 ಕೋಟಿ ರೂಪಾಯಿಗಳಿಗೆ ಹೊಸದಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡೆರ್ ಕರೆದು ಕಾರ್ಯನಿರ್ವಹಣೆ ಮಾಡಲು ತೀರ್ಮಾನಿಸಲಾಯಿತು.

2) ಕರಾಮುವಿಯಲ್ಲಿ ಇಂತಹ ಕಾರ್ಯಗಳಿಗೆ ಅನುಕೂಲವಾಗುವಂತೆ ಸಮಿತಿಗಳನ್ನು ರಚಿಸಿ ಅದರಲ್ಲಿ ಇಬ್ಬರು ವ್ಯವಸ್ಥಾಪನ ಮಂಡಳಿ ಸದಸ್ಯರುಗಳನ್ನು ನೇಮಕ ಮಾಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

**ವಿಷಯ ಸಂಖ್ಯೆ: 184.05**

ವಿಷಯ: 36ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ನಡಾವಳಿಯನ್ನು ಅನುಮೋದಿಸುವ ಕುರಿತು.

– * –

ದಿನಾಂಕ: 18–08–2025 ನಡೆದ 36ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನದ ನಡಾವಳಿಯನ್ನು, ಮುಂಬರುವ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಮಂಡಿಸಲಾಗಿದೆ.

*****

ತೀರ್ಮಾನ:

ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 36ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆಯಾಗಿರುವ ವಿಷಯಗಳ ರೀತ್ಯಾ ಯು.ಜಿ.ಸಿ.ಯು ದಿನಾಂಕ: 12.08.2025ರ ಸಾರ್ವಜನಿಕ ಪ್ರಕಟಣೆಯಲ್ಲಿ ತಿಳಿಸಿರುವಂತೆ Psychology, Micro-biology, Food and Nutrition Science, Bio-technology and Clinical Nutrition and Dietetics ವಿಷಯಗಳ ಎಲ್ಲಾ ಪ್ರವೇಶಾತಿಯನ್ನು ತಡೆಹಿಡಿದು ಸುತ್ತೋಲೆ ಹೊರಡಿಸಿದ್ದು, ಯು.ಜಿ.ಸಿ. ಮತ್ತು NCHAP ರವರಿಗೆ ನೇರವಾಗಿ ಭೇಟಿ ಮಾಡಿ ಮೇಲ್ಕಂಡ ವಿಷಯಗಳ ಪ್ರವೇಶಾತಿ ಕೋರುವುದು. ಒಂದು ವೇಳೆ ಅನುಮತಿ ದೊರೆಯದಿದ್ದಲ್ಲಿ ಜುಲೈ 2025ರ ಆವೃತ್ತಿಯಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಬೇರೆ ಕೋರ್ಸುಗಳಿಗೆ ಪ್ರವೇಶಾತಿ ಬದಲಾವಣೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕ ಪ್ರಕಟಣೆಯ ಮುಂದಿನ ದಿನಾಂಕದಿಂದ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ರದ್ದುಗೊಳಿಸಲು ಸಭೆಯು ತೀರ್ಮಾನಿಸಿತು.

#####

ಕುಲಪತಿಗಳು ಕುಲಸಚಿವರು

## ವಿಷಯ ಸಂಖ್ಯೆ: 184.06

**ವಿಷಯ: ಶ್ರೀಮತಿ ಪದ್ಮಲತಾ W/o ಲೇಟ್. ದೊಡ್ಡರಾಜು. ಎಲ್ ಇವರು ಅನುಕಂಪದ ಆಧಾರದ ಮೇಲೆ ಉದ್ಯೋಗ ಕೋರಿ ಸಲ್ಲಿಸಿರುವ ಮನವಿ ಪತ್ರ ದಿನಾಂಕ: 07.05.2025**

– * –

ಶ್ರೀಮತಿ ಪದ್ಮಲತಾ W/o ಲೇಟ್. ದೊಡ್ಡರಾಜು. ಎಲ್ ಇವರು ದಿನಾಂಕ: 07.05.2025 ರಂದು ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸಿ ನನ್ನ ಪತಿಯವರಾದ ಲೇಟ್ ದೊಡ್ಡರಾಜು. ಎಲ್ ರವರು ದ್ವಿತೀಯ ದರ್ಜೆ ಗುಮಾಸ್ತರಾಗಿ ಪರೀಕ್ಷಾಂಗ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ: 08.03.2025 ರಂದು ದೈವದೀನರಾಗಿರುತ್ತಾರೆ, ನನಗೆ ಎರಡು ಚಿಕ್ಕ ಮಕ್ಕಳಿದ್ದು, ನನ್ನ ಕುಟುಂಬ ಜೀವನವನ್ನು ನಿರ್ವಹಣೆ ಮಾಡಲು ಕಷ್ಟವಾಗಿರುವುದರಿಂದ. ನಾನು M.A ಪದವಿಯನ್ನು ಹೊಂದಿರುತ್ತೇನೆ. ನನ್ನ ವಿದ್ಯಾರ್ಹತೆಗೆ ಅನುಗುಣವಾಗಿ ಅನುಕಂಪದ ಆಧಾರದ ಮೇಲೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನಲ್ಲಿ ನೇಮಕಾತಿಯನ್ನು ನೀಡಲು ತಮ್ಮಲ್ಲಿ ಗೌರವ ಪೂರ್ವಕವಾಗಿ ಪ್ರಾರ್ಥಿಸಿಕೊಳ್ಳುತ್ತೇನೆ ಎಂದು ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಶ್ರೀಮತಿ ಪದ್ಮಲತಾ W/o ಲೇಟ್. ದೊಡ್ಡರಾಜು. ಎಲ್ ಇವರು ಅನುಕಂಪದ ಆಧಾರದ ಮೇಲೆ ನೌಕರಿಗೆ ಅರ್ಜಿ ಸಲ್ಲಿಸಿದ ದಿನಾಂಕಕ್ಕೆ 45 ವರ್ಷ 03 ತಿಂಗಳು ಪೂರೈಸಿದ್ದು, ವಿದ್ಯಾರ್ಹತೆಯಾಗಿ M.A ಪದವಿಯನ್ನು ಪೂರ್ಣಗೊಳಿಸಿರುವುದು ಅವರು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ತಿಳಿದು ಬಂದಿರುತ್ತದೆ.

ಈ ಸಂಬಂಧ, (1) ದಿ. ದೊಡ್ಡರಾಜು. ಎಲ್ ರವರ ಮರಣ ಸಮರ್ಥನಾ ಪತ್ರ, (2)ಮೃತರ ವಂಶವೃಕ್ಷದ ದೃಢೀಕರಣ ಪತ್ರ, (3) ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ಛಾಯಾ ಪ್ರತಿ, (4) ವರ್ಗಾವಣೆ ಪ್ರಮಾಣ ಪತ್ರ, (5) ಪಿ.ಯು.ಸಿ ಅಂಕಪಟ್ಟಿಯ ಛಾಯಾ ಪ್ರತಿ, (6) ಬಿ.ಎ ಮೂರು ವರ್ಷದ ಅಂಕಪಟ್ಟಿಯ ಛಾಯಾ ಪ್ರತಿಗಳು ಮತ್ತು ಘಟಿಕೋತ್ಸವ ಪ್ರಮಾಣ ಪತ್ರ, (7) ಎಂ.ಎ ಎರಡು ವರ್ಷದ ಅಂಕಪಟ್ಟಿಯ ಛಾಯಾ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಆದರೆ ಘಟಿಕೋತ್ಸವ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ, (8) ಅನುಸೂಚಿತ ಜಾತಿ ಅಥವಾ ಅನುಸೂಚಿತ ಬುಡಕಟ್ಟುಗಳ ಪ್ರಮಾಣ ಪತ್ರ, (9) ಆದಾಯ ದೃಢೀಕರಣ ಪತ್ರ, (10) ಆಧಾರ್ ಕಾರ್ಡ್ ನ ಛಾಯಾ ಪ್ರತಿ, (11) ಚುನಾವಣಾ ಆಯೋಗದ ಗುರುತಿನ ಚೀಟಿಯ ಛಾಯಾ ಪ್ರತಿ, (12) ರೇಷನ್ ಕಾರ್ಡ್ ನ ಛಾಯಾ ಪ್ರತಿ, (13) ಪೊಲೀಸ್ ಪರಿಶೀಲನಾ ಪ್ರಮಾಣ ಪತ್ರ, (14) ಪಾನ್ ಕಾರ್ಡ್ ನ ಛಾಯಾ ಪ್ರತಿಗಳನ್ನು ಅರ್ಜಿಯೊಂದಿಗೆ ಸಲ್ಲಿಸಿರುತ್ತಾರೆ.

ಶ್ರೀ ಲೇಟ್ ದೊಡ್ಡರಾಜು. ಎಲ್ ಇವರು ದಿನಾಂಕ: 08.03.2025 ರಂದು ಅಕಾಲಿಕ ಮರಣ ಹೊಂದಿರುತ್ತಾರೆ. ಮರಣದ ಸಂದರ್ಭದಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಸದರಿಯವರು ತಮ್ಮ ಸೇವಾ ವಹಿಯಲ್ಲಿ ನೀಡಿರುವ ಅವಲಂಬಿತರ ಮಾಹಿತಿಯಲ್ಲಿ ಪತ್ನಿಯಾಗಿ ಶ್ರೀಮತಿ ಪದ್ಮಲತಾ ಇವರ ಮಾಹಿತಿಯನ್ನು ನೀಡಿರುತ್ತಾರೆ. ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ಕರಾಮುವಿ ನಿಲಯವು ಪರಿನಿಯಮಾವಳಿಯನ್ನು ರಚಿಸಿಕೊಂಡಿರುತ್ತದೆ.

ಕರ್ನಾಟಕ ನಾಗರೀಕ ಸೇವೆಗಳು (Appointment on Compassionate Grounds) ನಿಯಮ 1996 ರಲ್ಲಿ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತು ತಿಳಿಸಲಾಗಿರುವ ಅರ್ಹತೆ ಮತ್ತು ಷರತ್ತುಗಳು ಹಾಗೂ ತತ್ಸಂಬಂಧ ಶ್ರೀ ದೊಡ್ಡರಾಜು. ಎಲ್ ಇವರ ಪತ್ನಿಗೆ ಸಂಬಂಧಿಸಿದ ಮಾಹಿತಿಯು ಈ ಕೆಳಕಂಡಂತಿರುತ್ತದೆ.

ಕುಲಪತಿಗಳು　　　　　　　　　　ಕುಲಸಚಿವರು

| ಕ್ರ ಸಂ | ಕೆ.ಸಿ.ಎಸ್. ನಿಯಮದಲ್ಲಿ ತಿಳಿಸಲಾಗಿರುವ ಅರ್ಹತೆ ಮತ್ತು ಷರತ್ತುಗಳು | ತತ್ಸಂಬಂಧ ಮಾಹಿತಿ |
|---|---|---|
| | **Eligibility for appointment**<br>1. Appointment on compassionate ground under these rules shall not be claimed as a matter of right and shall not be given as a matter of course. | 1. -------- |
| | 2. Appointment under these rules shall be restricted to the dependent of a deceased Government servant in the following order of preference namely-<br>[(i) in the case of the<br>deceased female Government servant<br>(a) a son; | 2.(a) ಶ್ರೀಮತಿ ಪದ್ಮಲತಾ ಇವರು ದಿ. ದೊಡ್ಡರಾಜು.ಎಸ್ ರವರ ಪತ್ನಿಯಾಗಿರುತ್ತಾರೆ. |
| | 3. An adopted son or daughter a deceased Government servant shall not be eligible for appointment under these rules [2][(4) A person against whom at the time of making application a criminal case is under investigation or trial, on the charge of having committed murder of the deceased Government servant or for abetting the commission of such offence shall not be eligible for appointment under these rules.] | 3. ಅನ್ವಯಿಸುವುದಿಲ್ಲ. |
| | 4.Conditions of appointment –<br>Appointment on compassionate grounds under these rules shall vi subject to the following conditions namely | 4. ಶ್ರೀಮತಿ ಪದ್ಮಲತಾ ಇವರು ಸಲ್ಲಿಸಿರುವ ಕುಟುಂಬದ ಆದಾಯ ದೃಢೀಕರಣ ಪತ್ರದಲ್ಲಿ ವಾರ್ಷಿಕ ರೂ. 12,000/- ಹಾಗೂ ಪರಿಶಿಷ್ಟ ಜಾತಿಯಲ್ಲಿ ಬರುವ ಆದಿ ಕರ್ನಾಟಕ ಜಾತಿಗೆ ಸೇರಿರುತ್ತಾರೆಂದು ದಾಖಲಿಸಲಾಗಿರುತ್ತದೆ. (ತಹಶೀಲ್ದಾರರು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ. ಇವರು ನೀಡಿರುವ |

ಕುಲಪತಿಗಳು ಕುಲಸಚಿವರು

(1) The family of the deceased Government servant should be in a financial crisis or destitution.

(2) Person seeking appointment shall be within the age limit specified for the post in the relevant rules of recruitment specially made in respect of any service or post read with sub-rule (3) of Rule ^ of the Karnataka Civil Serves ( General Recruitment) Rules, 1977 and where it is not so specified such person shall be within the age limits specified in the Karnataka Civil Services ( General Recruitment) Rules, 1977

(3) Person seeking appointment should posses the minimum qualification specified for the post in the relevant rules of recruitment specially made in respect of any service or post;

(4) Appointment shall be confide to any post in Group 'C' or Group 'D' depending upon the qualification specified for the post but excluding the posts carrying the pay scales higher than the scale of pay of the post of Assistant in the Karnataka Government Secretariat as may be revised from time to time and any other post in either of the groups as may be specified by the Government from time to time

(5) Appointment shall be made only against a direct recruitment vacancy.

(6) Appointment shall be made in the department in which the deceased Government servant was working.

ದೃಢೀಕರಣ ಪತ್ರ ಸಂಖ್ಯೆ: RD0039201022689, ದಿನಾಂಕ: 27.09.2014. ಶ್ರೀಮತಿ ಪದ್ಮಲತಾ ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿಯವರ ಜನ್ಮ ದಿನಾಂಕ: 02.02.1980 (ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ), ಅರ್ಜಿ ಸಲ್ಲಿಸಿದ ದಿನಾಂಕಕ್ಕೆ 45 ವರ್ಷ 03 ತಿಂಗಳು ಪೂರೈಸಿರುತ್ತಾರೆ. ಕ್ರಮ ಸಂಖ್ಯೆ: 03 ಮತ್ತು 04 ರ ಷರತ್ತುಗಳಿಗೆ ಸಂಬಂಧಿಸಿದಂತೆ ಶ್ರೀಮತಿ ಪದ್ಮಲತಾ ಇವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿಯವರು ಶೈಕ್ಷಣಿಕ ವಿದ್ಯಾರ್ಹತೆ ಎಂ.ಎ ಪದವಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ.

ಕರಾಮುವಿ ನಿಲಯವು ರಚಿಸಿಕೊಂಡಿರುವ C&R ನಿಯಮದ ಪ್ರಕಾರ ಶ್ರೀಮತಿ ಪದ್ಮಲತಾ ಇವರ ಶೈಕ್ಷಣಿಕ ವಿದ್ಯಾರ್ಹತೆಯನ್ನು ಪರಿಗಣಿಸಿ, ಕರಾಮುವಿ ನಿಲಯದಲ್ಲಿ ನೇರ ನೇಮಕಾತಿಯಡಿಯಲ್ಲಿ ಗ್ರೂಪ್ "ಸಿ" ವರ್ಗದ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ:

| ವಿವರ | ದ್ವಿದಗು | ಪ್ರದಗು |
|---|---|---|
| ಸೃಜನೆಯಾದ ಹುದ್ದೆಗಳು | 138 | 77 |
| 371 ಜೆ ರಡಿ ಮೀಸಲಾದ ಹುದ್ದೆಗಳು | 11 | 07 |
| 371 ಜೆ ರಡಿ ಮೀಸಲಾದ ಹುದ್ದೆಗಳನ್ನುಹೊರತುಪಡಿಸಿ ಉಳಿಯುವ ಹುದ್ದೆಗಳು | 127 | 70 |
| ಹಾಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರು | 76 | 65 |
| ಖಾಲಿ ಇರುವ ಹುದ್ದೆಗಳು | 62 | 12 |

ಕುಲಪತಿಗಳು ಕುಲಸಚಿವರು

ಪ್ರಥಮ ದರ್ಜೆ ಗುಮಾಸ್ತ ಒಟ್ಟು 77 ಹುದ್ದೆಗಳು ಸೃಜನೆಯಾಗಿದ್ದು, 50ರ ಅನುಪಾತದಲ್ಲಿ ನೇರ ನೇಮಕಾತಿಗೆ 38 ಹಾಗೂ ಪದೋನ್ನತಿಗೆ 39 ಹುದ್ದೆಗಳನ್ನು ಮೀಸಲಿರಿಸಿದ್ದು, ಇದರಲ್ಲಿ 371(ಜೆ) ಗೆ ಸೇರಿದ 03 ಪದೋನ್ನತಿ ಹುದ್ದೆಗಳು ಸೇರಿದಂತೆ 39 ಪದೋನ್ನತಿ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿರುತ್ತದೆ. 38 ನೇರ ನೇಮಕಾತಿ ಹುದ್ದೆಗಳಲ್ಲಿ ಅನುಕಂಪದ ಆಧಾರದ ಮೇಲೆ 04 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಮತ್ತು 27 ನೇರ ನೇಮಕಾತಿ ಹುದ್ದೆಗಳಲ್ಲಿ ಪದೋನ್ನತಿ ಪಡೆದು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಬಾಕಿ 11 ಹುದ್ದೆಗಳು ಉಳಿದಿದ್ದು ಇದರಲ್ಲಿ 371(ಜೆ) ನೇರ ನೇಮಕಾತಿ & ಪದೋನ್ನತಿಗೆ 07 ಹುದ್ದೆಗಳನ್ನು ಮೀಸಲಿರಿಸಿದ್ದು, ಬಾಕಿ 04 ನೇರ ನೇಮಕಾತಿ ಪ್ರಥಮ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತವೆ.

ದ್ವಿತೀಯ ದರ್ಜೆ ಗುಮಾಸ್ತ ಒಟ್ಟು 138 ಹುದ್ದೆಗಳು ಸೃಜನೆಯಾಗಿದ್ದು 371(ಜೆ)ಗೆ ಒಟ್ಟು 11 ಹುದ್ದೆಗಳನ್ನು ಮೀಸಲಿರಿಸಲಾಗಿರುತ್ತದೆ. ಉಳಿಕೆ 127 ದ್ವಿತೀಯ ದರ್ಜೆ ಗುಮಾಸ್ತ ಹುದ್ದಗಳನ್ನು 75:25ರ ಅನುಪಾತದಲ್ಲಿ ನೇರ ನೇಮಕಾತಿಗೆ 95 ಹಾಗೂ ಪದೋನ್ನತಿಗೆ 32 ಹುದ್ದೆಗಳನ್ನು ಮೀಸಲಿರಿಸಿದ್ದು, 32 ಪದೋನ್ನತಿ ಹುದ್ದೆಗಳಲ್ಲಿ 19 ಪದೋನ್ನತಿ ಹುದ್ದೆಗಳಿಗೆ ಪದೋನ್ನತಿ ನೀಡಲಾಗಿದ್ದು, ಬಾಕಿ 13 ಪದೋನ್ನತಿ ಹುದ್ದೆಗಳು ಖಾಲಿ ಇರುತ್ತವೆ. ಹಾಗೂ 95 ನೇರ ನೇಮಕಾತಿ ಹುದ್ದೆಗಳಲ್ಲಿ 53 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಹಾಗೂ ಅನುಕಂಪದ ಆಧಾರದ ಮೇಲೆ 04 ಹುದ್ದೆಗಳಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದು, ಬಾಕಿ 38 ನೇರ ನೇಮಕಾತಿ ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳು ಖಾಲಿ ಇರುತ್ತವೆ.

ಮುಂದುವರೆದಂತೆ, ಶ್ರೀ ದೊಡ್ಡರಾಜು.ಎಲ್ ಇವರು ದಿನಾಂಕ: 11.12.2002ರಲ್ಲಿ ತಾತ್ಕಾಲಿಕ ನೌಕರರಾಗಿ ಸೇವೆಗೆ ಸೇರಿದ್ದು, ನ್ಯಾಯಾಮೂರ್ತಿ ಡಾ.ಕೆ.ಭಕ್ತವತ್ಸಲ,ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು, ಬೆಂಗಳೂರು ಇವರ ಏಕ ಸದಸ್ಯ ಸತ್ಯ ಶೋಧನಾ ಸಮಿತಿಯ ವರದಿಯಲ್ಲಿ ತಾತ್ಕಾಲಿಕ ನೇಮಕಾತಿ ಸಂಬಂಧ ಈ ಕೆಳಕಂಡಂತೆ ಉಲ್ಲೇಖಿಸಲಾಗಿರುತ್ತದೆ.

I. " In the light of the decisions rendered by the Apex Court in the Cases of Umarani, Umadevi and Renu, Supra, I am of the view that the appointments of 88 persons(with Graded pay) more than 171 posts of Group-C/D Category, 29 Cleaning Staff, 26 DEO's(OACIs,), 4 Security Guards, 1 Garden Supervisor and 1 Co-ordinator on a temporary basis, are illegal and contrary to the KSOU General Recruitment Statutes, 2004, and Reservation Policy of the Government.

II. However, keeping in view the age factor and the temporary employees who have served the University for a continuous period of 10 years, they may be considered for absorption as against the sanctioned posts, which are vacant.

<u>Views and advise of His Excellency the Chancellor:</u>

Necessary steps may be taken as per law against the persons who have been appointed. Further, appointments shall be made strictly by following the rules and reservation policy of Government. ಎಂದಿರುತ್ತದೆ.

ಮುಂದುವರೆದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ವಿಶ್ವವಿದ್ಯಾನಿಲಯದಲ್ಲಿ ಕಾಲಿಕ ವೇತನ ಶ್ರೇಣಿ ನೌಕರರಾಗಿ 10 ವರ್ಷ ಪೂರೈಸಿರುವ ಸದರಿಯವರನ್ನು ಒಳಗೊಂಡಂತೆ 75 ಮಂದಿ ನೌಕರರನ್ನು ಅವರುಗಳು ವಿಶ್ವವಿದ್ಯಾನಿಲಯದ ತಾತ್ಕಾಲಿಕ ಸೇವೆಗೆ ವರದಿ ಮಾಡಿಕೊಂಡಿರುವ ದಿನಾಂಕದಿಂದ "ಸೇವಾ ಜೇಷ್ಠತೆಯ" ಆಧಾರದ ಮೇಲೆ ವಿಶ್ವವಿದ್ಯಾನಿಲಯದಲ್ಲಿ ನೇರ ನೇಮಕಾತಿಗೆ ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮಗಳನ್ವಯ

ಕುಲಪತಿಗಳು ಕುಲಸಚಿವರು

ಅವರುಗಳ ವಿದ್ಯಾರ್ಹತೆಯನ್ನು ಪರಿಗಣಿಸಿ ಹಾಗೂ ಮೀಸಲಾತಿ ನಿಯಮಗಳನ್ನು ಅನುಸರಿಸಿ, ವಿಶ್ವವಿದ್ಯಾನಿಲಯಕ್ಕೆ ಸರ್ಕಾರದಿಂದ ಮಂಜೂರಾತಿ ನೇರ ನೇಮಕಾತಿಗೆ ಖಾಲಿ ಇರುವ ಸಮಾನ ಖಾಯಂ ಹುದ್ದೆಗಳಲ್ಲಿ ದಿನಾಂಕ: 01.06.2022 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬಂದಂತೆ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಅಧಿಕೃತ ಜ್ಞಾಪನ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-02/1001/2022-23, ದಿನಾಂಕ: 01.08.2022 ರನ್ವಯ ಸೇವೆಯಲ್ಲಿ ವಿಲೀನಗೊಳಿಸಿ ಆದೇಶಿಸಲಾಗಿರುತ್ತದೆ. ಈ ಸಂಬಂಧ 2022-23ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಕಾಲಿಕ ವೇತನ ಶ್ರೇಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 75 ನೌಕರರನ್ನು ನಿಯಮಬಾಹಿರವಾಗಿ ಖಾಯಂಗೊಳಿಸಿರುವುದಕ್ಕೆ ಆಕ್ಷೇಪಣೆ ವ್ಯಕ್ತವಾಗಿರುತ್ತದೆ. ಸದರಿ ಆಡೀಟ್ ಆಕ್ಷೇಪಣೆಗೆ ಸಂಬಂಧಿಸಿದಂತೆ ಸೂಕ್ತ ದಾಖಲಾತಿಗಳೊಂದಿಗೆ ಮಾಹಿತಿಯನ್ನು ಸಹ ಸಲ್ಲಿಸಲಾಗಿರುತ್ತದೆ. ಆದಾಗ್ಯೂ ಸಹ ಆಡಿಟ್ ಆಕ್ಷೇಪಣೆಯಿಂದ ಕೈಬಿಟ್ಟಿರುವುದಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ದರ್ಜೆ ಸಹಾಯಕ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದಿವಂಗತ ಶ್ರೀ. ದೊಡ್ಡರಾಜು.ಎಲ್, ಇವರ ಪತ್ನಿಯಾದ ಶ್ರೀಮತಿ ಪದ್ಮಲತಾ ಇವರು ತಮ್ಮ ಪತಿಯವರ ಮರಣದ ಹಿನ್ನೆಲೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಸಲ್ಲಿಸಿರುವ ಮನವಿ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಶ್ರೀ. ಕೆ. ಹರೀಶ್ ಗೌಡರು ಮಾತನಾಡಿ, ಸದರಿ ನೌಕರರು ಗ್ರೇಡೆಡ್ ಪೇ ನೌಕರರೇ ಅಥವಾ ಖಾಯಂ ನೌಕರರೇ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಸದರಿ ನೌಕರರು ಖಾಯಂ ನೌಕರರಾಗಿರುತ್ತಾರೆಂದು ತಿಳಿಸಿದರು.

ಖಾಯಂ ನೌಕರರುಗಳಾದಲ್ಲಿ ಅವರು ಸೇವೆಯಲ್ಲಿ ಇದ್ದು, ಮರಣ ಹೊಂದಿದಲ್ಲಿ ಅನುಕಂಪದ ಆಧಾರದ ಮೇಲೆ ನೌಕರಿ ನೀಡಲೇಬೇಕೆಂದು ಶ್ರೀ. ಕೆ. ಹರೀಶ್ ಗೌಡರು ಸಭೆಗೆ ತಿಳಿಸಿದರು.

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ. ದೊಡ್ಡರಾಜು. ಎಲ್ ರವರು ವಿಶ್ವವಿದ್ಯಾನಿಲಯದ ಖಾಯಂ ನೌಕರರಾಗಿದ್ದು, ಸದರಿಯವರು ಅಕಾಲಿಕ ಮರಣ ಹೊಂದಿರುವುದರಿಂದ ಅವರ ಪತ್ನಿಯಾದ ಶ್ರೀಮತಿ ಪದ್ಮಲತಾ ರವರಿಗೆ ಕರಾಮುವಿ ಪರಿನಿಯಮಗಳ ಅನ್ವಯ ಅನುಕಂಪದ ಆಧಾರದ ಮೇಲೆ ಅವರ ವಿದ್ಯಾರ್ಹತೆಗೆ ಅನಗುಣವಾಗಿ ನೇಮಕಾತಿ ಮಾಡಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

<u>**ವಿಷಯ ಸಂಖ್ಯೆ: 184.07**</u>

**ವಿಷಯ: ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ತಾತ್ಕಾಲಿಕ (ಗ್ರೇಡೆಡ್ ಪೇ/ ಕ್ರೋಢೀಕೃತ ವೇತನ) ನೌಕರರು ಮರಣ ಹೊಂದಿರುವ ಹಿನ್ನೆಲೆಯಲ್ಲಿ, ಅವರ ಅವಲಂಬಿತರು ತಾತ್ಕಾಲಿಕ ಉದ್ಯೋಗ ಕೋರಿ ಮನವಿ ಸಲ್ಲಿಸಿರುವ ಕುರಿತು.**

– * –

ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ ತಾತ್ಕಾಲಿಕ (ಗ್ರೇಡೆಡ್ ಪೇ/ಕ್ರೋಢೀಕೃತ ವೇತನ) ನೌಕರರು ಅಕಾಲಿಕ ಮರಣಹೊಂದಿರುವ ಹಿನ್ನೆಲೆಯಲ್ಲಿ, ಅವರ ಅವಲಂಬಿತರು ಕೆಳಕಂಡಂತೆ ಮನವಿ ಸಲ್ಲಿಸಿದ್ದು, ತಮ್ಮ ಕುಟುಂಬ ನಿರ್ವಹಣೆಗಾಗಿ ಮಾನವೀಯತೆಯ ದೃಷ್ಟಿಯಿಂದ ವಿದ್ಯಾರ್ಹತೆಗನುಗುಣವಾಗಿ ವಿಶ್ವದ್ಯಾನಿಲಯದಲ್ಲಿ ತಾತ್ಕಾಲಿಕ ಉದ್ಯೋಗ ನೀಡುವಂತೆ ಕೋರಿರುತ್ತಾರೆ.

ಕುಲಪತಿಗಳು ಕುಲಸಚಿವರು

1. **ಶ್ರೀಮತಿ ಪಂಕಜಾಬಾಯಿ, ಸ್ವೀಪರ್, ಇಂಜಿನಿಯರಿಂಗ್ ವಿಭಾಗ,** ಇವರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಸುಮಾರು ಹತ್ತು ವರ್ಷಗಳಿಗೂ ಹೆಚ್ಚು ಸೇವೆ ಸಲ್ಲಿಸಿದ್ದು, ಇವರಿಗೆ ಕಚೇರಿ ಆದೇಶ ದಿನಾಂಕ: 20.06.2022ರಲ್ಲಿ ಗ್ರೇಡೆಡ್ ಪೇ ವೇತನವನ್ನು ಜಾರಿಗೊಳಿಸಲಾಗಿದ್ದು, ಇವರು ದಿನಾಂಕ: 10.04.2024 ರಂದು ಮರಣಹೊಂದಿರುತ್ತಾರೆ.

   **ಶ್ರೀ ಹರೀಶ್ ಐ (ಲೇಟ್ ಪಂಕಜಾಬಾಯಿ, ಇವರ ಪುತ್ರ)**, ನಂ.148/7, ಲಿಂಗದೇವರ ಕೊಪ್ಪಲು, ಮೈಸೂರು, ಇವರು ಉದ್ಯೋಗ ಕೋರಿ ದಿನಾಂಕ: 22.05.2024 ರಂದು ಮನವಿ ಪತ್ರ (ಅನುಬಂಧ-1) ಹಾಗೂ ದಾಖಲೆಗಳನ್ನು ಸಲ್ಲಿಸಿದ್ದು, ಇವರು **ದ್ವಿತೀಯ ಪಿ.ಯು.ಸಿ** ತೇರ್ಗಡೆ ಹೊಂದಿರುತ್ತಾರೆ.

2. **ಶ್ರೀ ರಮೇಶ ಡಿ.ಪಿ, ದ್ವಿ.ದ.ಗು, ಅಧ್ಯಯನ ಸಾಮಗ್ರಿ ವಿಭಾಗ,** ಇವರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಸುಮಾರು ಹತ್ತು ವರ್ಷಗಳಿಗೂ ಹೆಚ್ಚು ಸೇವೆ ಸಲ್ಲಿಸಿದ್ದು, ಇವರಿಗೆ ಕಚೇರಿ ಆದೇಶ ದಿನಾಂಕ: 20.06.2022ರಲ್ಲಿ ಗ್ರೇಡೆಡ್ ಪೇ ವೇತನವನ್ನು ಜಾರಿಗೊಳಿಸಲಾಗಿದ್ದು, ಇವರು ದಿನಾಂಕ: 10.09.2024 ರಂದು ಮರಣಹೊಂದಿರುತ್ತಾರೆ.

   **ಶ್ರೀಮತಿ ಶೈಲಶ್ರೀ (ಲೇಟ್ ರಮೇಶ್ ಡಿ.ಪಿ ಇವರ ಪತ್ನಿ)**, ದೇವನೂರು ಗ್ರಾಮ, ನಂಜನಗೂಡು (ತಾ), ಮೈಸೂರು, ಇವರು ಉದ್ಯೋಗ ಕೋರಿ ದಿನಾಂಕ: 11.01.2025 ರಂದು ಮನವಿ ಪತ್ರ (ಅನುಬಂಧ-2) ಹಾಗೂ ದಾಖಲೆಗಳನ್ನು ಸಲ್ಲಿಸಿದ್ದು, ಇವರು **ಎಂ.ಎ(ಕನ್ನಡ) ಪದವಿ ತೇರ್ಗಡೆ** ಹೊಂದಿರುತ್ತಾರೆ.

3. **ಶ್ರೀಮತಿ ಹೇಮಾವತಿ ಎಸ್. ಎಲ್,** ದ್ವಿ.ದ.ಗು, ಪರೀಕ್ಷಾ ವಿಭಾಗ, ಇವರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಸುಮಾರು ಹತ್ತು ವರ್ಷಗಳಿಗೂ ಹೆಚ್ಚು ಸೇವೆ ಸಲ್ಲಿಸಿದ್ದು, ಇವರಿಗೆ ಕಚೇರಿ ಆದೇಶ ದಿನಾಂಕ: 20.06.2022 ರಲ್ಲಿ ಗ್ರೇಡೆಡ್ ಪೇ ವೇತನವನ್ನು ಜಾರಿಗೊಳಿಸಲಾಗಿದ್ದು, ಇವರು ದಿನಾಂಕ: 01.01.2025 ರಂದು ಮರಣಹೊಂದಿರುತ್ತಾರೆ.

   **ಶ್ರೀ ಮನೋಜ್ ಎಲ್(ಲೇಟ್ ಹೇಮಾವತಿ ಎಸ್. ಎಲ್ ಇವರ ಪುತ್ರ),** ನಂ.4ಡಿ/64, ಮೈಸೂರು ವಿ.ವಿ ವಸತಿಗೃಹ, ರಾಮಸ್ವಾಮಿ ವೃತ್ತ, ಮೈಸೂರು, ಇವರು ಇವರು ಉದ್ಯೋಗ ಕೋರಿ ದಿನಾಂಕ: 15.01.2025 ರಂದು ಮನವಿ ಪತ್ರ(ಅನುಬಂಧ-3) ಹಾಗೂ ದಾಖಲೆಗಳನ್ನು ಸಲ್ಲಿಸಿದ್ದು, ಇವರು **ಎಸ್.ಎಸ್.ಎಲ್.ಸಿ** ತೇರ್ಗಡೆ ಹೊಂದಿರುತ್ತಾರೆ.

4. **ಶ್ರೀಮತಿ ಮೋಹನಕುಮಾರಿ ಎನ್,** ಸ್ವಚ್ಛತಾ ಸಿಬ್ಬಂದಿ, ಇಂಜಿನಿಯರಿಂಗ್ ವಿಭಾಗ, ಇವರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ (ಕ್ರೋಢೀಕೃತ ವೇತನ) ದಿನಾಂಕ: 26.04.2021 ರಿಂದ ಸೇವೆ ಸಲ್ಲಿಸಿದ್ದು, ಇವರು ದಿನಾಂಕ: 01.09.2024 ರಂದು ಮರಣಹೊಂದಿರುತ್ತಾರೆ.

   **ಕು. ಕುಸುಮ ಜೆ(ಲೇಟ್ ಶ್ರೀಮತಿ ಮೋಹನ ಕುಮಾರಿ, ಇವರ ಪುತ್ರಿ)**, ಇವರು, ಉದ್ಯೋಗ ಕೋರಿ ದಿನಾಂಕ: 19.09.2024 ರಂದು ಮನವಿ ಪತ್ರ(ಅನುಬಂಧ-4) ಹಾಗೂ ದಾಖಲೆಗಳನ್ನು ಸಲ್ಲಿಸಿದ್ದು, ಇವರು **ಬಿ.ಕಾಂ** ಪದವಿ ತೇರ್ಗಡೆ ಹೊಂದಿರುತ್ತಾರೆ.

5. **ಶ್ರೀ ನಿಂಗನಾಯಕ,** ಪರಿಚಾರಕ, ಕರಾಮುವಿ ಆರೋಗ್ಯ ಕೇಂದ್ರ, ಇವರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ (ಕ್ರೋಢೀಕೃತ ವೇತನ) ದಿನಾಂಕ:01.02.2024 ರಿಂದ ಸೇವೆ ಸಲ್ಲಿಸಿದ್ದು, ಇವರು ದಿನಾಂಕ:22.04.2025 ರಂದು ಮರಣಹೊಂದಿರುತ್ತಾರೆ.

   **ಶ್ರೀಮತಿ ಪವಿತ್ರ ಬಿನ್ (ಲೇಟ್ ಶ್ರೀ ನಿಂಗನಾಯಕ ಇವರ ಪತ್ನಿ)**, ಪಡುವಾರಹಳ್ಳಿ, ಮೈಸೂರು, ಉದ್ಯೋಗ ಕೋರಿ ದಿನಾಂಕ: 14.05.2025 ರಂದು ಮನವಿ ಪತ್ರ(ಅನುಬಂಧ-5) ಹಾಗೂ ದಾಖಲೆಗಳನ್ನು ಸಲ್ಲಿಸಿದ್ದು, ಇವರು **9ನೇ ತರಗತಿ ವಿದ್ಯಾರ್ಹತೆ** ಹೊಂದಿರುತ್ತಾರೆ.

6. **ಶ್ರೀ ಪಾಂಡಿಯನ್**, ಡಿ ಗ್ರೂಪ್, ಇಂಜಿನಿಯರಿಂಗ್ ವಿಭಾಗ, ಇವರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ (ಕ್ರೋಢೀಕೃತ ವೇತನ) ದಿನಾಂಕ: 01.12.2012 ರಿಂದ ಸೇವೆ ಸಲ್ಲಿಸಿದ್ದು, ಇವರು ದಿನಾಂಕ: 05.10.2020 ರಂದು ಮರಣಹೊಂದಿರುತ್ತಾರೆ.

**ಕುಲಪತಿಗಳು** **ಕುಲಸಚಿವರು**

**ಶ್ರೀಮತಿ ಪ್ರೇಮಕುಮಾರಿ ಎನ್ (ಲೇಟ್ ಶ್ರೀ. ಪಾಂಡಿಯನ್ ಇವರ ಪತ್ನಿ)**, ಹೆಬ್ಬಾಳು ಕಾಲೋನಿ, ಮೈಸೂರು, ಇವರು ದಿನಾಂಕ: 11.06.2025ರಂದು ಸಲ್ಲಿಸಿರುವ ಮನವಿ ಪತ್ರದಲ್ಲಿ (ಅನುಬಂಧ-6), ತಮ್ಮ ಕುಟುಂಬ ನಿರ್ವಹಣೆಗಾಗಿ ತಮ್ಮ ಮಗ **ಶ್ರೀ ರತ್ನವೇಲ್ ಪಿ**, ಇವರಿಗೆ ಸೂಕ್ತ ಉದ್ಯೋಗ ನೀಡುವಂತೆ ಕೋರಿದ್ದು, ಸದರಿಯವರು **ಎಸ್.ಎಸ್.ಎಲ್.ಸಿ** ತೇರ್ಗಡೆ ಹೊಂದಿರುತ್ತಾರೆ.

**ಮುಂದುವರಿದು, ಈ ಸಂಬಂಧ ಕೆಳಕಂಡ ಅಂಶಗಳನ್ನು ಅವಗಾಹನೆಗಾಗಿ ತರಲಾಗಿದೆ.**

- ವಿಶ್ವವಿದ್ಯಾನಿಲಯದ ತಾತ್ಕಾಲಿಕ ನೌಕರರು ಮರಣಹೊಂದಿದ ಸಂದರ್ಭದಲ್ಲಿ ಅನುಕಂಪದ ಆಧಾರದ ಮೇಲೆ ಅವಲಂಭಿತರಿಗೆ ಉದ್ಯೋಗ ನೀಡುವ ಸಂಬಂಧ ಯಾವುದೇ ನಿಯಮ/ಪರಿನಿಯಮ ಇರುವುದಿಲ್ಲ.

  ಆದರೆ ಮಾನವೀಯತೆಯ ಆಧಾರದ ಮೇಲೆ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ತೀರ್ಮಾನ/ಮಾನ್ಯ ಕುಲಪತಿಗಳ ಆದೇಶದನ್ವಯ ವಿಶ್ವವಿದ್ಯಾನಿಲಯದ ಕಾಯ್ದೆ-1992ರ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮ 2(9)(iii)ರನ್ವಯ ಮಾನ್ಯ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ, ಕೆಳಕಂಡವರಿಗೆ ಉದ್ಯೋಗ ನೀಡಲಾಗಿರುವುದನ್ನು ಅವಗಾಹನೆಗಾಗಿ ತರಲಾಗಿದೆ.

  1. **ಲೇಟ್ ಶ್ರೀ ಮಹದೇವಯ್ಯ**, ದ್ವಿ.ದ.ಗು(ಕಾ.ವೇ.ಶ್ರೇ), ಇವರ **ಪತ್ನಿ ಶ್ರೀಮತಿ ಮಂಗಳಮ್ಮ** ಇವರಿಗೆ ದಿನಾಂಕ: 26.08.2022 ರಂದು ನಡೆದ ವ್ಯವಸ್ಥಾಪನ ಮಂಡಳಿಯ 169ನೇ ಸಭೆಯ(ವಿಷಯ ಸಂಖ್ಯೆ:169.05) ತೀರ್ಮಾನದನ್ವಯ ಸ್ವಚ್ಛತಾ ಹುದ್ದೆಗೆ ತಾತ್ಕಾಲಿಕ ನೇಮಕಾತಿ ಮಾಡಲಾಗಿರುತ್ತದೆ.
  2. **ಲೇಟ್ ಶ್ರೀ ಪ್ರತಾಪ್,** ಡಿ ಗ್ರೂಪ್ (ತಾತ್ಕಾಲಿಕ), ಇವರ ಸಹೋದರ **ಶ್ರೀ ಪ್ರಮೋದ್ ಎಸ್,** ಇವರಿಗೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಪರಿಚಾರಕ ಹುದ್ದೆಗೆ ತಾತ್ಕಾಲಿಕ ನೇಮಕಾತಿ ಮಾಡಲಾಗಿರುತ್ತದೆ.
  3. **ಲೇಟ್ ಶ್ರೀ ಪವನ್ ಕೆ,** ಸೇವಕ(ತಾತ್ಕಾಲಿಕ), ಇವರ ಪತ್ನಿ **ಶ್ರೀಮತಿ ಲಕ್ಷ್ಮೀಬಾಯಿ,** ಇವರಿಗೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ, ಪರಿಚಾರಕಿ ಹುದ್ದೆಗೆ ತಾತ್ಕಾಲಿಕ ನೇಮಕಾತಿ ಮಾಡಲಾಗಿರುತ್ತದೆ.

- ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು, ಇವರ ಪತ್ರ ಸಂಖ್ಯೆ:ಇಡಿ 112 ಹೆಚ್‌ಪಿಯು 2023, ದಿನಾಂಕ: 18.06.2024 ರಲ್ಲಿ ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ತಾತ್ಕಾಲಿಕ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಿದ್ದು, ಹೆಚ್ಚುವರಿ ಸಿಬ್ಬಂದಿಗಳನ್ನು ತೆಗೆದು ಹಾಕುವ ಮೂಲಕ ಮತ್ತು ಕಠಿಣ ಆರ್ಥಿಕ ಶಿಸ್ತನ್ನು ಜಾರಿಗೆ ತರುವ ಮೂಲಕ ವಿಶ್ವವಿದ್ಯಾನಿಲಯದ ಆವರ್ತಕ ಆಡಳಿತಾತ್ಮಕ ವೆಚ್ಚವನ್ನು ಕಡಿತಗೊಳಿಸುವಂತೆಯೂ ಸ್ಪಷ್ಟ ನಿರ್ದೇಶನ ನೀಡಿರುವುದನ್ನು ಅವಗಾಹನೆಗಾಗಿ ತರಲಾಗಿದೆ(ಅನುಬಂಧ-7).

- ಸರ್ಕಾರಿ ಲೆಕ್ಕಪರಿಶೋಧನೆಯಲ್ಲಿ ತಾತ್ಕಾಲಿಕ ನೌಕರರ ನೇಮಕಾತಿಯನ್ನು ಮಂಜೂರಾದ ಖಾಲಿ ಹುದ್ದೆಗಳಿಗೆ ಪರಿನಿಯಮಗಳನ್ವಯ ಖಾಯಂ ನೌಕರರ ನೇಮಕಾತಿ ಮಾಡಲು ಅನುಸರಿಸಬೇಕಾದ ವಿಧಾನಗಳನ್ನೇ ಅನುಸರಿಸಬೇಕಿದ್ದು, ಮಂಜೂರಾಗದಿರುವ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಅಧಿಕಾರ ಕುಲಪತಿಗಳಿಗೆ ಇರುವುದಿಲ್ಲವೆಂದು ಹಾಗೂ ಆರು ತಿಂಗಳ ಅವಧಿಯ ನಂತರವೂ ಮುಂದುವರೆಸಿ ಪರಿನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಹಾಗೂ ಸರ್ಕಾರದ ನಿರ್ದೇಶನಗಳ ಪಾಲನೆಯಾಗಿರುವುದಿಲ್ಲವೆಂದು ಅಕ್ಷೇಪಣೆ ವ್ಯಕ್ತಪಡಿಸಿ, ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯಾಗುವಂತೆ ಮಾಡಿರುವ ಕುಲಸಚಿವರು(ಆಡಳಿತ) ಹಾಗೂ ಹಣಕಾಸು ಅಧಿಕಾರಿಗಳಿಂದ ವಸೂಲಿಸಲು ಸೂಚಿಸಿರುವುದನ್ನು ಸಹ ಅವಗಾಹನೆಗಾಗಿ ತರಲಾಗಿದೆ.

**ಕುಲಪತಿಗಳು** **ಕುಲಸಚಿವರು**

- **ದಿನಾಂಕ:09.06.2025 ರಂದು ನಡೆದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 183ನೇ ಸಭೆಯಲ್ಲಿ "ಇನ್ನು ಮುಂದೆ ಯಾವುದೇ ತಾತ್ಕಾಲಿಕ ಹುದ್ದೆಗಳಿಗೆ ನೇಮಕಾತಿ ಮತ್ತು ಪದನಾಮ ಬದಲಾವಣೆ ಮಾಡಬಾರದೆಂದು ತೀರ್ಮಾನಿಸಲಾಗಿರುತ್ತದೆ (ವಿಷಯ ಸಂಖ್ಯೆ:183.02).**

ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗಾಗಿ ತರುತ್ತಾ, ಸಲ್ಲಿಸಿರುವ ಮನವಿಗಳ ಸಂಬಂಧ ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಸದರಿ ವಿಷಯದ ಬಗ್ಗೆ ಡಾ. ಮಹೇಶ್ .ಎಸ್ ರವರು ಮಾತನಾಡಿ ಸರ್ಕಾರದ ನಿಯಮಗಳ ರೀತ್ಯಾ ಖಾಯಂ ನೌಕರರುಗಳು ಅಕಾಲಿಕ ಮರಣ ಹೊಂದಿದ ಒಂದು ವರ್ಷದ ಒಳಗೆ ಇದ್ದರೆ ಮಾತ್ರ ಅಂತಹವರುಗಳಿಗೆ ವಿದ್ಯಾರ್ಹತೆಗೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳುವ ನಿಯಮಗಳಿರುತ್ತದೆ ಎಂದು ತಿಳಿಸಿದರು.

ಆದಾಗ್ಯೂ, ತಾತ್ಕಾಲಿಕ ನೌಕರರುಗಳು/ತಾತ್ಕಾಲಿಕ ಗ್ರೇಡೆಡ್ ಪೇ ನೌಕರರುಗಳು ಕರ್ತವ್ಯ ನಿರ್ವಹಣಾ ಸಂದರ್ಭದಲ್ಲಿ ಅಕಾಲಿಕ ಮರಣ ಹೊಂದಿದ ಒಂದು ವರ್ಷದ ಒಳಗೆ ಇದ್ದರೆ ಮಾತ್ರ ಕರಾಮುವಿ ಕಾಯ್ದೆ 1992ರ ಕಲಂ 2(9) iii ಪ್ರಕಾರ ಮಾನವೀಯತೆ ಆಧಾರದ ಮೇಲೆ ತಾತ್ಕಾಲಿಕ ನೌಕರರನ್ನಾಗಿ ನೇಮಕ ಮಾಡಿಕೊಳ್ಳಬಹುದೆಂದು ತಿಳಿಸಿದರು.

ಮುಂದುವರೆದು 2021ರಲ್ಲಿ ಒಬ್ಬರು ತಾತ್ಕಾಲಿಕ ನೌಕರರು ಮರಣ ಹೊಂದಿದ್ದು, ಆ ಸಂದರ್ಭದಲ್ಲಿ ಅವರ ಮಗ/ಮಗಳಿಗೆ 18 ವರ್ಷ ಪೂರೈಸಿರುವುದಿಲ್ಲ. ಅಂತಹವರು 18 ವರ್ಷ ಮುಗಿದ ನಂತರ ಈಗ ಉದ್ಯೋಗ ಕೋರಿ ಅರ್ಜಿ ಸಲ್ಲಿಸಿರುವುದು ಕಂಡು ಬಂದಿರುತ್ತದೆಂದು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿಶ್ವವಿದ್ಯಾನಿಲಯದ ಯಾವುದೇ ತಾತ್ಕಾಲಿಕ ನೌಕರರುಗಳು/ತಾತ್ಕಾಲಿಕ ಗ್ರೇಡೆಡ್ ಪೇ ನೌಕರರುಗಳು ಕರ್ತವ್ಯ ನಿರ್ವಹಣಾ ಸಂದರ್ಭದಲ್ಲಿ ಅಕಾಲಿಕ ಮರಣ ಹೊಂದಿದ ಒಂದು ವರ್ಷದ ಒಳಗೆ ವಿಶ್ವವಿದ್ಯಾನಿಲಯಕ್ಕೆ ಮನವಿ ಸಲ್ಲಿಸಿದ್ದಲ್ಲಿ ಮಾತ್ರ ಅಂತಹವರುಗಳ ಅವಲಂಬಿತರ ಪತ್ನಿ/ಮಕ್ಕಳುಗಳಿಗೆ ಮಾನವೀಯತೆ ಆಧಾರದ ಮೇಲೆ ಕರಾಮುವಿ ಕಾಯ್ದೆ 1992ರ ಕಲಂ 2(9) iii ಪ್ರಕಾರ ತಾತ್ಕಾಲಿಕ ನೌಕರರನ್ನಾಗಿ ನೇಮಕ ಮಾಡಿಕೊಳ್ಳಬಹುದೆಂದು ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 184.08**

**ವಿಷಯ: 2024–25ರ ಜನವರಿ ಆವೃತ್ತಿಯಲ್ಲಿನ ಪ್ರವೇಶಾತಿ ಕುರಿತು.**

– * –

2024–25ನೇ ಶೈಕ್ಷಣಿಕ ಸಾಲಿನಲ್ಲಿನ ದ್ವಿತೀಯ ಆವೃತ್ತಿಯಾದ ಜನವರಿ ಆವೃತ್ತಿಯಲ್ಲಿ ಸ್ನಾತಕ ಪದವಿ ಮಟ್ಟದಲ್ಲಿನ 8 ಕಾರ್ಯಕ್ರಮಗಳು (ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ, ಬಿಬಿಎ, ಬಿಎಸ್ಸಿ–ಐಟಿ, ಬಿಎಸ್‌ಡಬ್ಲ್ಯೂ, ಬಿಲಿಬ್‌ಐಎಸ್ಸಿ), ಸ್ನಾತಕೋತ್ತರ ಪದವಿಯ 36 ಕಾರ್ಯ ಕ್ರಮಗಳು (ಎಂಎ {14}, ಎಂಕಾಂ, ಎಂಎಸ್ಸಿ {17}, ಎಂಬಿಎ, ಎಂಸಿಎ, ಎಂಎಸ್‌ಡಬ್ಲ್ಯೂ, ಎಂಲಿಬ್‌ಐಎಸ್ಸಿ), 13 ಪಿಜಿ ಸರ್ಟಿಫಿಕೇಟ್, 7 ಡಿಪ್ಲೊಮಾ, 4 ಯುಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು ಸೇರಿದಂತೆ ಒಟ್ಟಾರೆ 68 ಕಾರ್ಯಕ್ರಮಗಳಿಗೆ ಪ್ರವೇಶಾತಿಯನ್ನು ದಿನಾಂಕ:06.02.2025 ರಂದು ಪ್ರಕಟಣೆ ಹೊರಡಿಸುವ ಮೂಲಕ ಕೇಂದ್ರ ಕಚೇರಿ ಮೈಸೂರು ಹಾಗೂ 36 ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಾರಂಭಿಸಲಾಯಿತು.

**ಕುಲಪತಿಗಳು** **ಕುಲಸಚಿವರು**

ಈ ಆವೃತ್ತಿಯಲ್ಲಿನ ಪ್ರವೇಶಾತಿಯಿಂದ ಯುಜಿಸಿಯು ಪ್ರತಿ ವಿದ್ಯಾರ್ಥಿಗೂ ಎಬಿಸಿ ಮತ್ತು ಡೆಬ್ ಐಡಿಗಳನ್ನು ಕ್ರಿಯೇಟ್ ಮಾಡಿ ಅವುಗಳ ಮೂಲಕ ಯಾವ ವಿದ್ಯಾರ್ಥಿ ಯಾವ ವಿವಿ ನಿಲಯದಲ್ಲಿ ಯಾವ ಕೋರ್ಸಿಗೆ ಪ್ರವೇಶಾತಿ ಪಡೆದಿದ್ದಾನೆ ಎಂಬ ನೂತನ ನಿರ್ದೇಶನದನ್ವಯ ವಿವಿ ನಿಲಯವು ಕ್ರಮವಹಿಸಿರುತ್ತದೆ.

ಯುಜಿಸಿಯ ನಿರ್ದೇಶನದಂತೆ ಪ್ರವೇಶಾತಿಯನ್ನು ದಿನಾಂಕ: 01.04.2025ಕ್ಕೆ ಪೂರ್ಣಗೊಳಿಸಲಾಗಿ, ಒಟ್ಟಾರೆ **14,433** ವಿದ್ಯಾರ್ಥಿಗಳು ನೇರ ಪ್ರವೇಶಾತಿಯೂ ಒಳಗೊಂಡಂತೆ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಪಡೆದಿರುತ್ತಾರೆ.

ಮುಂದುವರೆದು, ಯುಜಿಸಿಯ ಹೊಸ ನಿರ್ದೇಶನದಂತೆ ರಿವರ್ಸ್ ಎಪಿಐ ಕ್ರಮದಲ್ಲಿ ಕ್ರಿಯೇಟ್ ಮಾಡಲಾಗಿದ್ದ ವಿದ್ಯಾರ್ಥಿಗಳ ಡೆಬ್ ಐಡಿಯ ಮೂಲಕ ವಿದ್ಯಾರ್ಥಿಗಳ ವಿವರವನ್ನು ಡೆಬ್ ಪೋರ್ಟಲ್‌ಗೆ ಪುಷ್ ಮಾಡುವ ಮೂಲಕ ಸದರಿ ಆವೃತ್ತಿಯ ಪ್ರವೇಶಾತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ.

ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ವಿವಿಧ ವಿವಿ ನಿಲಯಗಳು, ಶೈಕ್ಷಣಿಕ ಸಂಸ್ಥೆಗಳಲ್ಲಿ ತಮ್ಮ ಯುಜಿ / ಪಿಜಿ ಶಿಕ್ಷಣಕ್ರಮಗಳನ್ನು ಪ್ರಾರಂಭಿಸಿ ಅನಿವಾರ್ಯ ಕಾರಣಗಳಿಂದ ತಮ್ಮ ಪದವಿಯನ್ನು ಪೂರ್ಣಗೊಳಿಸಿಕೊಳ್ಳಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ತಮ್ಮ ಪದವಿಯನ್ನು ಪೂರ್ಣಗೊಳಿಸಿಕೊಳ್ಳಲು ಕರಾಮುವಿ ನಿಲಯದಲ್ಲಿ ಅವಕಾಶ ಕಲ್ಪಿಸುವ ಸಲುವಾಗಿ ಆಧ್ಯಾದೇಶ - Ordinance Governing Lateral Entry to the Schemes of CBCS for Karnataka State Open University, Mysuruದನ್ವಯ ಎಲ್ಲಾ ನಿಕಾಯಗಳ ನಿರ್ದೇಶಕರುಗಳ ಸಹಕಾರದೊಂದಿಗೆ ಯುಜಿ/ಪಿಜಿ ಮಟ್ಟದಲ್ಲಿನ ದ್ವಿತೀಯ/ತೃತೀಯ ತರಗತಿಗಳಿಗೆ ನೇರ ಪ್ರವೇಶಾತಿಗೆ ಅವಕಾಶ ಮಾಡಿಕೊಟ್ಟು ಅದರಡಿ ಸುಮಾರು **234** ವಿದ್ಯಾರ್ಥಿಗಳು ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿಗೆ ಅನುವು ಮಾಡಿಕೊಡಲಾಗಿರುತ್ತದೆ.

ಈ ಮೇಲಿನ ಮಾಹಿತಿಯೊಂದಿಗೆ 2024–25ನೇ ಸಾಲಿನ ಜನವರಿ ಆವೃತ್ತಿಯಲ್ಲಿ ಕೇಂದ್ರ ಕಚೇರಿ ಮೈಸೂರು, **36** ಪ್ರಾದೇಶಿಕ ಕೇಂದ್ರಗಳ ಮೂಲಕ ವಿವಿಧ ಶಿಕ್ಷಣಕ್ರಮಗಳಿಗೆ ನೇರ ಪ್ರವೇಶಾತಿಯೂ ಒಳಗೊಂಡಂತೆ ಪ್ರವೇಶ ಪಡೆದ **14.433** ವಿದ್ಯಾರ್ಥಿಗಳ ಪ್ರವೇಶಾತಿ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 2024–25ರ ಜನವರಿ ಆವೃತ್ತಿಯಲ್ಲಿ 14.433 ವಿದ್ಯಾರ್ಥಿಗಳ ಪ್ರವೇಶಾತಿ ಪಡೆದಿದ್ದು, ಅವುಗಳನ್ನು ಯು.ಜಿ.ಸಿ ನಿಯಮಗಳ ಪ್ರಕಾರ ಪ್ರವೇಶಾತಿ ಮಾಡಿರುತ್ತಾರೆಂದು ತಿಳಿದು ಅನುಮೋದಿಸಲಾಗಿದೆ.**

#####

**<u>ವಿಷಯ ಸಂಖ್ಯೆ: 184.09</u>**

**ವಿಷಯ: 2024–25ರ ಜನವರಿ ಆವೃತ್ತಿಯಲ್ಲಿನ ಪ್ರವೇಶಾತಿಗೆ ಭರಿಸಿರುವ ಜಾಹೀರಾತು / ಪ್ರಾಯೋಜಿಕತ್ವ ವೆಚ್ಚದ ಪ್ರಕ್ರಿಯೆಗೆ ಅನುಮೋದನೆ ಪಡೆಯುವ ಕುರಿತು.**

– * –

2024–25ನೇ ಶೈಕ್ಷಣಿಕ ಸಾಲಿನಲ್ಲಿನ ದ್ವಿತೀಯ ಆವೃತ್ತಿಯಾದ ಜನವರಿ ಆವೃತ್ತಿಯಲ್ಲಿನ ಪ್ರವೇಶಾತಿಯನ್ನು ಸ್ನಾತಕ ಪದವಿ ಮಟ್ಟದಲ್ಲಿನ 8 ಕಾರ್ಯಕ್ರಮಗಳು, ಸ್ನಾತಕೋತ್ತರ ಪದವಿಯ 36 ಕಾರ್ಯಕ್ರಮಗಳು, 13 ಪಿಜಿ ಸರ್ಟಿಫಿಕೇಟ್, 7 ಡಿಪ್ಲೊಮಾ, 4 ಯುಜಿ ಸರ್ಟಿಫಿಕೇಟ್ ಕಾರ್ಯಕ್ರಮಗಳು ಸೇರಿದಂತೆ ಒಟ್ಟಾರೆ 68 ಕಾರ್ಯಕ್ರಮಗಳಿಗೆ ಪ್ರವೇಶಾತಿಯನ್ನು ದಿನಾಂಕ: **06.02.2025**ರಂದು ಪ್ರಕಟಣೆ ಹೊರಡಿಸುವ ಮೂಲಕ ಕೇಂದ್ರ ಕಚೇರಿ ಮೈಸೂರು ಹಾಗೂ 36 ಪ್ರಾದೇಶಿಕ ಕೇಂದ್ರಗಳಲ್ಲಿ ದಿನಾಂಕ: 10.02.2025ರಿಂದ ಪ್ರವೇಶಾತಿ ಪ್ರಾರಂಭಿಸಲಾಯಿತು.

**ಕುಲಪತಿಗಳು** **ಕುಲಸಚಿವರು**

ಯುಜಿಸಿಯು ಈ ಜನವರಿ ಆವೃತ್ತಿಯ ಪ್ರವೇಶಾತಿಗೆ ದಿನಾಂಕ: 01.04.2025ಅನ್ನು ಅಂತಿಮ ದಿನಾಂಕವೆಂದು ಘೋಷಣೆ ಮಾಡಿದಂತೆ ಪ್ರವೇಶಾತಿಯನ್ನು ದಿನಾಂಕ: 01.04.2025ಕ್ಕೆ ಅಂತಿಮಗೊಳಿಸಲಾಗಿ, ನೇರ ಪ್ರವೇಶಾತಿಯೂ ಒಳಗೊಂಡಂತೆ ಒಟ್ಟಾರೆ 14,433 ವಿದ್ಯಾರ್ಥಿಗಳು ವಿವಿಧ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಪಡೆದಿದ್ದು, ವಿದ್ಯಾರ್ಥಿಗಳ ಡೇಟಾವನ್ನು ಯುಜಿಸಿಯ ಡೆಬ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಮೂಲಕ 2024–25ರ ಜನವರಿ ಆವೃತ್ತಿಯ ಪ್ರವೇಶಾತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಈ ಪ್ರವೇಶಾತಿಯ ಪ್ರಕ್ರಿಯೆಯನ್ನು ಸಂಪೂರ್ಣ ಆನ್‌ಲೈನ್‌ಗೊಳಿಸಲಾಗಿದ್ದು, ವಿವಿ ನಿಲಯದ ಶೈಕ್ಷಣಿಕ ಕಾರ್ಯಕ್ರಮಗಳು ಹಾಗೂ ನೀಡುವ ಶೈಕ್ಷಣಿಕ ಸೇವೆಗಳು, ಇರುವ ರಿಯಾಯಿತಿಗಳ ಮಾಹಿತಿಯನ್ನು ವಿದ್ಯಾರ್ಥಿಗಳು ಹಾಗೂ ಆಸಕ್ತ ಸಾರ್ವಜನಿಕರಿಗೆ ತಿಳಿಸುವ ನಿಟ್ಟಿನಲ್ಲಿ ಮಾನ್ಯ ಕುಲಪತಿಗಳು ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ನಡೆಸಿದ ಸರಣಿ ಪತ್ರಿಕಾ ಗೋಷ್ಠಿಗಳ ಜೊತೆಗೆ ಮಾನ್ಯ ಕುಲಪತಿಗಳ ನಿರ್ದೇಶನದಂತೆ ಮುದ್ರಣ ಹಾಗೂ ದೃಷ್ಯ ಮಾಧ್ಯಮದಲ್ಲಿ ದೈನಂದಿನ ಕನ್ನಡ ಮತ್ತು ಆಂಗ್ಲ ದಿನಪತ್ರಿಕೆಗಳ ಮೂಲಕ ಕಪ್ಪು ಬಿಳುಪಿನಲ್ಲಿ ರಾಜ್ಯ / ಸ್ಥಳೀಯ ಆವೃತ್ತಿಗಳಲ್ಲಿ ಜಾಹೀರಾತು, ವಿವಿಧ ಕನ್ನಡ ನ್ಯೂಸ್ ಚಾನಲ್‌ಗಳಲ್ಲಿ ಬ್ಯಾನರ್ ವಿತ್ ವಾಯ್ಸ್ ಓವರ್ ಮೂಲಕ ಸರ್ಕಾರವು ನಿಗದಿಪಡಿಸಿರುವ ಡಿಐಪಿ ದರದಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಸಂಸ್ಥೆಯ ಮೂಲಕ ಜಾಹೀರಾತನ್ನು ಪ್ರವೇಶಾತಿ ನಡೆದ ಅವಧಿಯಲ್ಲಿನ ವಿವಿಧ ದಿನಾಂಕಗಳಲ್ಲಿ ಕಾಲಕಾಲಕ್ಕೆ ಜಾಹೀರಾತು ನೀಡಲಾಗಿರುತ್ತದೆ. ವಿವಿಧ ಪತ್ರಿಕೆಗಳು ವಿವಿಧ ಸ್ಥಳಗಳಲ್ಲಿ ನಡೆಸಿದ ಶಿಕ್ಷಣ ಮೇಳಗಳಲ್ಲಿ ಪ್ರಾಯೋಜಿಕತ್ವ ನೀಡುವ ಮೂಲಕ ಭಾಗವಹಿಸಲಾಗಿರುತ್ತದೆ. ಕೆಲವು ಸ್ಮರಣ ಸಂಚಿಕೆಗಳಿಗೆ ಪ್ರಾಯೋಜಿಕತ್ವ ನೀಡಲಾಗಿರುತ್ತದೆ. ಒಟ್ಟಾರೆ ರೂ. 40,47,223/– (ನಲವತ್ತು ಲಕ್ಷದ ನಲವತ್ತೇಳು ಸಾವಿರದ ಎರಡು ನೂರ ಇಪ್ಪತ್ತ ಮೂರು ರೂಪಾಯಿಗಳು ಮಾತ್ರ) ಗಳನ್ನು ಜಾಹೀರಾತು/ ಪ್ರಾಯೋಜಿಕತ್ವ ವೆಚ್ಚವಾಗಿ ಭರಿಸಲಾಗಿರುತ್ತದೆ.

ಈ ಮೇಲಿನ ಮಾಹಿತಿಯೊಂದಿಗೆ 2024–25ನೇ ಸಾಲಿನ ಜನವರಿ ಆವೃತ್ತಿಯಲ್ಲಿನ ಪ್ರವೇಶಾತಿ ಸಂಬಂಧದಲ್ಲಿ ವಿವಿನಿಲಯದ ಶೈಕ್ಷಣಿಕ ಕಾರ್ಯಕ್ರಮಗಳು/ಪ್ರವೇಶಾತಿಗೆ ಅನುಸರಿಸಬೇಕಾದ ಕ್ರಮಗಳು / ನೀಡುವ ಸೇವೆಗಳು / ರಿಯಾಯಿತಿಗಳ ಮಾಹಿತಿಯನ್ನು ವಿದ್ಯಾರ್ಥಿಗಳು ಹಾಗೂ ಆಸಕ್ತ ಸಾರ್ವಜನಿಕರಿಗೆ ತಿಳಿಸುವ ನಿಟ್ಟಿನಲ್ಲಿ ಸರ್ಕಾರದ ಡಿಐಪಿ ದರದಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಏಜನ್ಸಿಯ ಮೂಲಕ/ನೇರವಾಗಿ ಆಯಾ ಸಂಸ್ಥೆಗಳಿಗೆ ನೀಡಲಾದ ಜಾಹೀರಾತುಗಳ ಸಂಬಂಧದಲ್ಲಿ ವ್ಯಯಿಸಲ್ಪಟ್ಟ ರೂ. **40,47,223/–** ಜಾಹೀರಾತು/ ಪ್ರಾಯೋಜಿಕತ್ವ ವೆಚ್ಚಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, 2024–25ರ ಜನವರಿ ಆವೃತ್ತಿಯಲ್ಲಿನ ಪ್ರವೇಶಾತಿಗೆ ಭರಿಸಿರುವ ಜಾಹೀರಾತು/ಪ್ರಾಯೋಜಿಕತ್ವ ವೆಚ್ಚದ ಪ್ರಕ್ರಿಯೆಯನ್ನು ಡಿಐಪಿ ದರದಲ್ಲಿ ಸರ್ಕಾರದ ಅಧಿಕೃತ ಜಾಹೀರಾತು ಏಜನ್ಸಿಯ ಮೂಲಕ/ನೇರವಾಗಿ ಆಯಾ ಸಂಸ್ಥೆಗಳಿಗೆ ನೀಡಲಾದ ಜಾಹೀರಾತುಗಳ ಸಂಬಂಧದಲ್ಲಿ ವ್ಯಯಿಸಲ್ಪಟ್ಟ ರೂ. 40,47,223/– ಜಾಹೀರಾತು/ ಪ್ರಾಯೋಜಿಕತ್ವ ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ.**

#####

**ವಿಷಯ ಸಂಖ್ಯೆ: 184.10**

**ವಿಷಯ: ಶ್ರೀ. ಬಿ. ಮಹೇಶ, ಪ್ರದಗು, ಜೀವರಸಾಯನಶಾಸ್ತ್ರ ವಿಭಾಗ, ಕರಾಮುವಿ, ಮೈಸೂರು ಇವರ ಪತ್ನಿಯ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿ ಕುರಿತು.**

– * –

ಕುಲಪತಿಗಳು | ಕುಲಸಚಿವರು

ಶ್ರೀ. ಬಿ. ಮಹೇಶ, ಪ್ರದಗು, ಜೀವರಸಾಯನಶಾಸ್ತ್ರ ವಿಭಾಗ, ಕರಾಮುವಿ, ಮೈಸೂರು ಇವರು ತಮ್ಮ ಪತ್ನಿಯಾದ ಶ್ರೀಮತಿ. ಪೂರ್ಣಿಮಾ. ಎನ್ ಇವರಿಗೆ ಕಾಮಾಕ್ಷಿ ಆಸ್ಪತ್ರೆ, ಕುವೆಂಪುನಗರ, ಮೈಸೂರು ಇಲ್ಲಿ ಒಳ ಮತ್ತು ಹೋರ ರೋಗಿಯಾಗಿ ಚಿಕಿತ್ಸೆಯನ್ನು ಕೊಡಿಸಿ, ಎರಡು ಹುಂಡಿಗಳ ಒಟ್ಟಾರೆ ಮೊತ್ತ ರೂ. 37,649/–ಗಳ ಮರುಭರಿಕೆ ಮಾಡಿಕೊಡಲು ದಿನಾಂಕ: 15/07/2025 ಮತ್ತು 21/07/2025 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಶ್ರೀ. ಬಿ. ಮಹೇಶ, ಪ್ರದಗು, ಇವರು ದಿನಾಂಕ:31/07/2025ರಂದು ವಯೋನಿವೃತಿಯನ್ನು ಹೊಂದಿರುತ್ತಾರೆ. ಸದರಿ ಎರಡು ವೈದ್ಯಕೀಯ ಮರುಭರಿಕೆಯ ಹುಂಡಿಗಳನ್ನು ತಮ್ಮ ಸೇವಾ ಅವಧಿಯಲ್ಲಿ ಸಲ್ಲಿಸಿರುತ್ತಾರೆ.

ಸದರಿಯವರ ವೈದ್ಯಕೀಯ ಮರುಭರಿಕೆಯ ಹುಂಡಿಯನ್ನು KMAR ನಿಯಮ 1963 ಮತ್ತು CGHS ಬೆಂಗಳೂರು–2014ರ ದರಗಳನ್ವಯ ಪರಿಶೀಲಿಸಲಾಗಿದ್ದು, ಸದರಿಯವರಿಗೆ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ. 26,290/–ಗಳಾಗಿರುತ್ತವೆ.

ಮುಂದುವರೆದು, ಪ್ರಸಕ್ತ 2025–26ನೇ ಆರ್ಥಿಕ ಸಾಲಿನಲ್ಲಿ ಇವರಿಗೆ ದಿನಾಂಕ: 09/05/2025ರಂದು ಮೊತ್ತ ರೂ. 16,770/– ಮತ್ತು ದಿನಾಂಕ: 24/06/2025ರಂದು ರೂ. 83,062/–ಗಳನ್ನು ಪಾವತಿಸಲಾಗಿರುತ್ತದೆ. ಸದರಿ ಹುಂಡಿಯ ಮೊತ್ತ ರೂ. 26,290/– ಸೇರಿಸಿದರೆ ವೈದ್ಯಕೀಯ ವೆಚ್ಚದ ಮರುಭರಿಕೆಯ ಒಟ್ಟಾರೆ ಮೊತ್ತ ರೂ. 1,26,122/–ಗಳಾಗುತ್ತದೆ.

ವಿಶ್ವವಿದ್ಯಾನಿಲಯದ ಪರಿನಿಯಮ 23(3)ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ.1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಸಂಬಂಧವಾಗಿ ಶ್ರೀ. ಬಿ. ಮಹೇಶ, ಪ್ರದಗು, ಜೀವರಸಾಯನಶಾಸ್ತ್ರ ವಿಭಾಗ, ಕರಾಮುವಿ, ಮೈಸೂರು ಇವರ ಪತ್ನಿಯ ವೈದ್ಯಕೀಯ ವೆಚ್ಚದ ಮರುಭರಿಕೆ ಮೊತ್ತ ರೂ. 26,290/– (ಇಪ್ಪತ್ತಾರು ಸಾವಿರದ ಎರಡು ನೂರ ತ್ತೊಂಬತ್ತು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

*****

<u>ತೀರ್ಮಾನ:</u>

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ. ಬಿ. ಮಹೇಶ, ಪ್ರದಗು, ಜೀವರಸಾಯನಶಾಸ್ತ್ರ ವಿಭಾಗ, ಕರಾಮುವಿ, ಮೈಸೂರು ಇವರು ತಮ್ಮ ಪತ್ನಿಯಾದ ಶ್ರೀಮತಿ. ಪೂರ್ಣಿಮಾ. ಎನ್ ಇವರಿಗೆ ಕಾಮಾಕ್ಷಿ ಆಸ್ಪತ್ರೆ, ಕುವೆಂಪುನಗರ, ಮೈಸೂರು ಇಲ್ಲಿ ಒಳ ಮತ್ತು ಹೋರ ರೋಗಿಯಾಗಿ ಚಿಕಿತ್ಸೆಯನ್ನು ಕೊಡಿಸಿ, ಎರಡು ಹುಂಡಿಗಳ ಒಟ್ಟಾರೆ ಮೊತ್ತ ರೂ. 37,649/–ಗಳ ಮರುಭರಿಕೆ ಮಾಡಿಕೊಡಲು ದಿನಾಂಕ: 15/07/2025 ಮತ್ತು 21/07/2025 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿದ್ದು, ಇವುಗಳನ್ನು ಕುಲಂಕುಷವಾಗಿ ಪರಿಶೀಲಿಸಿ ರೂ.26,290/_ ಗಳನ್ನು ಪಾವತಿಸಲು ಸಭೆಯು ತೀರ್ಮಾನಿಸಲಾಯಿತು.**

#####

ಕುಲಪತಿಗಳು ಕುಲಸಚಿವರು

**ವಿಷಯ ಸಂಖ್ಯೆ: 184.11**

**ವಿಷಯ: ಶ್ರೀ. ಸುರೇಶ. ಎನ್, ಅಧೀಕ್ಷಕರು, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು ಇವರ ತಾಯಿಯ ವೈದ್ಯಕೀಯ ವೆಚ್ಚದ ಮರುಭರಿಕೆ ಹುಂಡಿ ಕುರಿತು.**

– * –

ಶ್ರೀ. ಸುರೇಶ. ಎನ್, ಅಧೀಕ್ಷಕರು, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು, ಇವರು ತಮ್ಮ ತಾಯಿಯಾದ ಶ್ರೀಮತಿ. ಶಾಂತಮ್ಮ ಇವರಿಗೆ ಅಪೋಲೊ ಬಿಜಿಎಸ್ ಆಸ್ಪತ್ರೆ, ಕುವೆಂಪುನಗರ, ಮೈಸೂರುನಲ್ಲಿ ಇಲ್ಲಿ ಒಳ ಮತ್ತು ಹೋರ ರೋಗಿಯಾಗಿ ಚಿಕಿತ್ಸೆಯನ್ನು ಕೊಡಿಸಿ, ಎರಡು ಹುಂಡಿಗಳ ಒಟ್ಟಾರೆ ಮೊತ್ತ ರೂ. 7,55,853/–ಗಳ ಮರುಭರಿಕೆ ಮಾಡಿಕೊಡಲು ದಿನಾಂಕ: 19/06/2025 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಸದರಿಯವರ ವೈದ್ಯಕೀಯ ಮರುಭರಿಕೆಯ ಹುಂಡಿಯನ್ನು KMAR ನಿಯಮ 1963 ಮತ್ತು CGHS ಬೆಂಗಳೂರು–2014ರ ದರಗಳನ್ವಯ ಪರಿಶೀಲಿಸಲಾಗಿದ್ದು, ಸದರಿಯವರಿಗೆ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ. 2,38,378/–ಗಳಾಗಿರುತ್ತವೆ.

ವಿವಿ ನಿಲಯದ ಪರಿನಿಯಮ 23(3)ರಲ್ಲಿ, ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ. 1 ಲಕ್ಷ ಮೀರಬಾರದು ಎಂದಿರುತ್ತದೆ. ಹಾಗೆಯೇ, 23(5)ರಲ್ಲಿ ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಬಹುದು ಎಂದಿರುತ್ತದೆ (ಪ್ರತಿ ಲಗತ್ತಿಸಿದೆ).

ಈ ಸಂಬಂಧವಾಗಿ ಶ್ರೀ. ಸುರೇಶ. ಎನ್, ಅಧೀಕ್ಷಕರು, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು, ಇವರ ತಾಯಿಯ ವೈದ್ಯಕೀಯ ವೆಚ್ಚದ ಮರುಭರಿಕೆ ಮೊತ್ತ ರೂ. 2,38,378/– (ಎರಡು ಲಕ್ಷದ ಮೂವತ್ತೆಂಟು ಸಾವಿರದ ಮೂರು ನೂರ ಎಪ್ಪತ್ತೆಂಟು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

*****

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಶ್ರೀ. ಸುರೇಶ. ಎನ್, ಅಧೀಕ್ಷಕರು, ಪರೀಕ್ಷಾ ವಿಭಾಗ, ಕರಾಮುವಿ, ಮೈಸೂರು, ಇವರು ತಮ್ಮ ತಾಯಿಯಾದ ಶ್ರೀಮತಿ. ಶಾಂತಮ್ಮ ಇವರಿಗೆ ಅಪೋಲೊ ಬಿಜಿಎಸ್ ಆಸ್ಪತ್ರೆ, ಕುವೆಂಪುನಗರ, ಮೈಸೂರು ಇಲ್ಲಿ ಒಳ ಮತ್ತು ಹೋರ ರೋಗಿಯಾಗಿ ಚಿಕಿತ್ಸೆಯನ್ನು ಕೊಡಿಸಿ, ಎರಡು ಹುಂಡಿಗಳ ಒಟ್ಟಾರೆ ಮೊತ್ತ ರೂ. 7,55,853/–ಗಳ ಮರುಭರಿಕೆ ಮಾಡಿಕೊಡಲು ದಿನಾಂಕ: 19/06/2025 ರಂದು ವಿಶ್ವವಿದ್ಯಾನಿಲಯಕ್ಕೆ ಮನವಿ ಪತ್ರವನ್ನು ಸಲ್ಲಿಸಿದ್ದು, ಇವುಗಳನ್ನು ಕುಲಂಕುಷವಾಗಿ ಪರಿಶೀಲಿಸಿ ಅಂತಿಮವಾಗಿ ವೈದ್ಯಕೀಯ ವೆಚ್ಚದ ಮರುಭರಿಕೆ ಮೊತ್ತ ರೂ. 2,38,378/– (ಎರಡು ಲಕ್ಷದ ಮೂವತ್ತೆಂಟು ಸಾವಿರದ ಮೂರು ನೂರ ಎಪ್ಪತ್ತೆಂಟು ರೂಪಾಯಿಗಳು ಮಾತ್ರ)ಗಳನ್ನು ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ಕುಲಪತಿಗಳು                                        ಕುಲಸಚಿವರು

<u>ವಿಷಯ ಸಂಖ್ಯೆ: 184.12</u>

**ವಿಷಯ: ಪ್ರೊ. ಎನ್. ಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಇವರನ್ನು ವಿ.ವಿ. ನಿಲಯದ ಸೇವೆಯಲ್ಲಿ ತಾತ್ಕಾಲಿಕವಾಗಿ ಮುಂದುವರಿಸಿರುವ ಕುರಿತು.**

– * –

ಪ್ರೊ. ಎನ್. ಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಇವರು 62 ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ, ಸದರಿಯವರನ್ನು ವಿಶ್ವವಿದ್ಯಾನಿಲಯದ ದಿನಾಂಕ: 26.12.2024ರ ಅಧಿಕೃತ ಜ್ಞಾಪನದನ್ವಯ ದಿನಾಂಕ: 30.06.2025ರ ಅಪರಾಹ್ನದಿಂದ ಜಾರಿಗೆ ಬಂದಂತೆ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಬೇಕಾಗಿರುತ್ತದೆ.

ಪ್ರೊ.ಎನ್.ಲಕ್ಷ್ಮಿ.ಇವರು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು, ಇಲ್ಲಿ WP No: 16396/2025 ಅನ್ನು ದಾಖಲಿಸಿ ತನ್ನ ವಯೋ ನಿವೃತ್ತಿ ಅವಧಿಯನ್ನು 65 ವರ್ಷಕ್ಕೆ ನಿಗದಿಪಡಿಸುವಂತೆ ಕೋರಿ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 09.06.2025ರಂದು ಈ ಕೆಳಗಿನಂತೆ ಮಧ್ಯಂತರ ಆದೇಶ ಹೊರಡಿಸಿರುತ್ತದೆ (ಪ್ರತಿ ಲಗತ್ತಿಸಿದೆ).

> **"……. learned counsel for the petitioner submits that in the similar circumstances, this Court has granted an interim order in W.P No.11554/2024 dated 22.04.2024.**
>
> **In view of the above, to maintain parity, operation and execution of Annexure-H dated:26.12.2024 is stayed, till next date of hearing ….."**

ಮಾನ್ಯ ಉಚ್ಚನ್ಯಾಯಾಲಯದ ಮಧ್ಯಂತರ ಆದೇಶದ ರಿತ್ಯಾ ಹಾಗೂ ಕರಾಮುವಿ ಪರಿನಿಯಮ "Condition of Service" ನಿಯಮ 3(iii) ರನ್ವಯ ಪ್ರೊ. ಎನ್.ಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಇವರನ್ನು ಸದರಿ ಪ್ರಕರಣದ ಮುಂದಿನ ವಿಚಾರಣೆ ದಿನಾಂಕದವರೆಗೆ ಮಾಹೆಯಾನ ಸಂಭಾವನೆಯಾಗಿ ರೂ. 25,000/- (ಇಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲು ನಿಗದಿಪಡಿಸಿ ಸದರಿಯವರನ್ನು ವಿ.ವಿ.ನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ಸೇವೆಯಲ್ಲಿ ತಾತ್ಕಾಲಿಕವಾಗಿ ಮುಂದುವರಿಸಿ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/11/2025-26, ದಿನಾಂಕ: 30.06.2025ರ ಆದೇಶ ಹೊರಡಿಸಲಾಗಿರುತ್ತದೆ.

ಪ್ರೊ. ಎನ್. ಲಕ್ಷ್ಮಿರವರು ಮೇಲ್ಕಂಡ ಆದೇಶದನ್ವಯ ದಿನಾಂಕ: 30.06.2025ರಂದು ವಿ.ವಿ.ನಿಲಯದ ಸೇವೆಯಲ್ಲಿ ಕರ್ತವ್ಯದ ಮೇಲೆ ವರದಿ ಮಾಡಿಕೊಂಡಿರುತ್ತಾರೆ. ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಸದರಿ ಕ್ರಮವನ್ನು ಮಾನ್ಯ ವ್ಯವಸ್ಥಾಪನ ಮಂಡಳಿ ಸಭೆಯ ಗಮನಕ್ಕೆ ತರುತ್ತಾ ಅನುಸಮರ್ಥನೆಗಾಗಿ ವಿಷಯ ಮಂಡಿಸಿದೆ.

*****

ಪ್ರೊ. ಎನ್. ಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಇವರು 62 ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ, ಸದರಿಯವರನ್ನು ವಿಶ್ವವಿದ್ಯಾನಿಲಯದ ದಿನಾಂಕ: 26.12.2024ರ ಅಧಿಕೃತ ಜ್ಞಾಪನದನ್ವಯ ದಿನಾಂಕ: 30.06.2025ರ ಅಪರಾಹ್ನದಿಂದ ಜಾರಿಗೆ ಬಂದಂತೆ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಬೇಕಾಗಿರುತ್ತದೆ. ಸದರಿಯವರು WP No:16396/2025 ಅನ್ನು ದಾಖಲಿಸಿ ತನ್ನ ವಯೋನಿವೃತ್ತಿ ಅವಧಿಯನ್ನು 65 ವರ್ಷಕ್ಕೆ ನಿಗದಿಪಡಿಸುವಂತೆ ಕೋರಿ ಪ್ರಕರಣ ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 09.06.2025ರಂದು ಈ ಕೆಳಗಿನಂತೆ ಮಧ್ಯಂತರ ಆದೇಶ ಹೊರಡಿಸಿರುತ್ತದೆ (ಪ್ರತಿ ಲಗತ್ತಿಸಿದೆ). ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ಕುಲಪತಿಗಳು　　　　　　　　　　　　　　　　ಕುಲಸಚಿವರು

ಶ್ರೀ. ಕೆ. ಹರೀಶ್ ಗೌಡರು ಮಾತನಾಡಿ ಪ್ರೊ. ಎನ್. ಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಇವರು ಸರ್ಕಾರದ ನಿಯಮಾವಳಿಗಳ ಪ್ರಕಾರ 62 ವರ್ಷ ವಿಶ್ವವಿದ್ಯಾನಿಲಯದಲ್ಲಿ ಸೇವೆ ಪೂರೈಸಿದ್ದು, ಸದರಿಯವರನ್ನು ಕೂಡಲೇ ಸೇವೆಯಿಂದ ಬಿಡುಗಡೆಗೊಳಿಸಬೇಕೆಂದು ತಿಳಿಸಿದರು.

ತೀರ್ಮಾನ:

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಪ್ರೊ. ಎನ್. ಲಕ್ಷ್ಮಿ, ಹಿರಿಯ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ ಇವರು ಸರ್ಕಾರದ ನಿಯಮಾವಳಿಗಳ ಪ್ರಕಾರ 62 ವರ್ಷ ವಿಶ್ವವಿದ್ಯಾನಿಲಯದಲ್ಲಿ ಸೇವೆ ಪೂರೈಸಿರುವುದರಿಂದ ಚಾಲ್ತಿಯಲ್ಲಿರುವ ಸರ್ಕಾರದ ನಿಯಮಗಳನ್ವಯ ಸದರಿಯವರನ್ನು ತಕ್ಷಣದಿಂದ ಜಾರಿಗೆ ಬಂದಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ವಿಷಯ ಸಂಖ್ಯೆ: 184.13**

**ವಿಷಯ: ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ Kitchen ಮತ್ತು Dining Hall ಅನ್ನು ವಿಸ್ತರಿಸಿ ನವೀಕರಿಸುವ ಹಾಗೂ ಇತರೆ ದುರಸ್ಥಿ ಕೆಲಸಗಳನ್ನು ನಿರ್ವಹಿಸುವುದರ ಬಗ್ಗೆ.**

– * –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರತಿ ಶೈಕ್ಷಣಿಕ ವರ್ಷವು ಘಟಿಕೋತ್ಸವ ಸಮಾರಂಭ ನಡೆಯುತ್ತಿದ್ದು, ಸದರಿ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣ ಪತ್ರ ಮತ್ತು ಗಣ್ಯ ವ್ಯಕ್ತಿಗಳಿಗೆ D-Litt ಪ್ರಶಸ್ತಿ ಪುರಸ್ಕಾರಗಳನ್ನು ವಿತರಿಸಲು ಘನತೆವೆತ್ತ ರಾಜ್ಯಪಾಲರು, ಮುಖ್ಯ ಅತಿಥಿಗಳು, ಉನ್ನತ ಶಿಕ್ಷಣ ಸಚಿವರು, ವ್ಯವಸ್ಥಾಪನ ಮಂಡಳಿ ಸದಸ್ಯರುಗಳು ಸೇರಿದಂತೆ ಇತರೆ ಗಣ್ಯ ವ್ಯಕ್ತಿಗಳು ಆಗಮಿಸುತ್ತಿರುತ್ತಾರೆ. ಈ ಸಂದರ್ಭದಲ್ಲಿ ಸದರಿ ಗಣ್ಯ ವ್ಯಕ್ತಿಗಳಿಗೆ ಅತಿಥಿಗೃಹದ ಮುಂಭಾಗದಲ್ಲಿ ಊಟದ ವ್ಯವಸ್ಥೆಯನ್ನು ಕಲ್ಪಿಸಲು ಹೈಟೆಕ್ (German / Pagoda) ಶಾಮಿಯಾನದೊಂದಿಗೆ ಸುಸಜ್ಜಿತವಾದ ಊಟದ ಮೇಜು ಮತ್ತು ಇತರೆ ಅಗತ್ಯ ವಸ್ತುಗಳ ವ್ಯವಸ್ಥೆಯನ್ನು ಪ್ರತಿ ವರ್ಷ ಮಾಡಲಾಗುತ್ತಿದ್ದು ಇದಕ್ಕೆ ಪ್ರತಿ ವರ್ಷವೂ ಶಾಮಿಯಾನ ಬಾಡಿಗೆ ಮತ್ತು ಇತರೆ ಕಾರ್ಯಗಳಿಗೆ ಹುಂಡಿ ಪಾವತಿಸಲಾಗುತ್ತಿರುತ್ತದೆ.

ಈ ಸಂಬಂಧ ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಪ್ರಸ್ತುತವಿರುವ ಅತಿಥಿ ಗೃಹದಲ್ಲಿ Kitchen ಹಾಗೂ Dining Hall ಅನ್ನು ವಿಸ್ತರಿಸಿ ಮತ್ತು ನವೀಕರಿಸಿ ಸದರಿ ಘಟಿಕೋತ್ಸವ ಸಮಾರಂಭಕ್ಕೆ ಆಗಮಿಸುವ VVIP/VIP ಗಳಿಗೆ ಗಣ್ಯರಿಗೆ ಊಟದ ವ್ಯವಸ್ಥೆಗೆ ಅನುಕೂಲವಾಗುವಂತೆ ಅತಿಥಿ ಗೃಹದಲ್ಲಿನ Kitchen ಅನ್ನು ಅಥಿತಿ ಗೃಹದ ಹಿಂಬಾಗಕ್ಕೆ Kitchen ಅನ್ನು ವಿಸ್ತರಿಸಲು ಅಗತ್ಯ ಕಾಮಗಾರಿ ಮತ್ತು Dining Hall ಅನ್ನು ಅಗತ್ಯೆಗೆ ತಕ್ಕಂತೆ ನವೀಕರಿಸಲು ಹಾಗೂ ಅಥಿತಿ ಗೃಹ ಕಟ್ಟಡವು ಪೂರ್ಣಗೊಂಡು 15 ವರ್ಷಮೇಲ್ಪಟ್ಟಿರುವುದರಿಂದ ಸದರಿ ಕಾಮಗಾರಿಯೊಂದಿಗೆ ಅಗತ್ಯವಿರುವ ದುರಸ್ತಿ ಕಾಮಗಾರಿ ಒಳಗೊಂಡಂತೆ Civil Works, Wall Paneling, False Ceiling, Electrical Works ಮತ್ತು ಇತರೆ ಕೆಲಸಗಳಿಗೆ ಸಂಬಂಧಿಸಿದಂತೆ ಕಾಮಗಾರಿಯ ಅಂದಾಜು ಮೊತ್ತ ರೂ. 99,00,000/– (ಜಿ.ಎಸ್.ಟಿ ಸಹಿತ) ಗಳಾಗಬಹುದೆಂದು ಅಂದಾಜಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ, ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ Kitchen ಮತ್ತು Dining Hall ಅನ್ನು ವಿಸ್ತರಿಸಿ ನವೀಕರಿಸುವ ಹಾಗೂ ಇತರೆ ದುರಸ್ಥಿ ಕಾಮಗಾರಿಗಳನ್ನು ಒಟ್ಟು ಅಂದಾಜು ವೆಚ್ಚ ರೂ. 99,00,000/–ಗಳ ವೆಚ್ಚದಲ್ಲಿ ನಿಯಮಾನುಸಾರ ಕೈಗೊಳ್ಳುವುದರ ಸಂಬಂಧದ ವಿಷಯವನ್ನು ವ್ಯವಸ್ಥಾಪನ ಮಂಡಳಿಯ ಸಭೆಯ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

*****

**ಕುಲಪತಿಗಳು** **ಕುಲಸಚಿವರು**

ಶ್ರೀ. ಅಡಗೂರು ಹೆಚ್. ವಿಶ್ವನಾಥ್‌ರವರು ಮಾತನಾಡಿ, ಕರಾಮುವಿ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ Kitchen ಮತ್ತು Dining Hall ಅನ್ನು ವಿಸ್ತರಿಸುವ ಅವಕಾಶವಿದೆಯೇ ಎಂದು ಕೇಳಿದರು.

ಡಾ. ಮಹೇಶ .ಎಸ್ ರವರು ಮಾತನಾಡಿ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ Kitchen ಮತ್ತು Dining Hall ಅನ್ನು ವಿಸ್ತರಿಸಿ, ನವೀಕರಿಸುವ ಬದಲು ದುರಸ್ಥಿ ಕಾರ್ಯಗಳನ್ನು ಮಾಡುವುದು ಸೂಕ್ತವೆಂದು ತಿಳಿಸಿದರು.

**ತೀರ್ಮಾನ:**

**ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ವಿವಿನಿಲಯದ ಆವರಣದಲ್ಲಿರುವ ಅತಿಥಿ ಗೃಹದಲ್ಲಿನ Kitchen ಮತ್ತು Dining Hall ಅನ್ನು ವಿಸ್ತರಿಸಿ ನವೀಕರಿಸುವ ಬದಲು ಇತರೆ ದುರಸ್ಥಿ ಕಾಮಗಾರಿಗಳನ್ನು ಮಾಡುವ ಸಂಬಂಧ ನಿಯಮಾನುಸಾರ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

**ಪೂರಕ ವಿಷಯಗಳ ಕಾರ್ಯಸೂಚಿ**

**ವಿಷಯ ಸಂಖ್ಯೆ: 184.22**

**ವಿಷಯ: ಡಾ. ಸುಮತಿ ರಾಮಕೃಷ್ಣ ಗೌಡ ಇವರ ವಿರುದ್ಧ ಬಿ.ಸಿ.ಎ ವಿದ್ಯಾರ್ಥಿಗಳು ನೀಡಿರುವ ದೂರಿಗೆ ಸಂಬಂಧಿಸಿದಂತೆ ಪರಿಶೀಲಿಸಲು 'ವಿಚಾರಣಾ ಸಮಿತಿ'ಯನ್ನು ರಚಿಸಿರುವ ಕುರಿತು.**

– * –

ಡಾ. ಸುಮತಿ ರಾಮಕೃಷ್ಣ ಗೌಡ, ಸಹ ಪ್ರಾಧ್ಯಾಪಕರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಇವರ ವಿರುದ್ಧ ಬಿ.ಸಿ.ಎ ವಿದ್ಯಾರ್ಥಿಗಳು ಪ್ರಾಜೆಕ್ಟ ಕಾರ್ಯಗಳನ್ನು ಪೂರ್ಣಗೊಳಿಸಲು ಲಂಚ ಪಡೆಯುತ್ತಿರುವುದಾಗಿ ಆರೋಪಿಸಿ ಇ-ಮೇಲ್ ಪತ್ರಗಳ ಮೂಲಕ ದೂರನ್ನು ಸಲ್ಲಿಸಿರುತ್ತಾರೆ (**ಅನುಬಂಧ-1**). ವಿದ್ಯಾರ್ಥಿಗಳು ನೀಡಿರುವ ದೂರಿಗೆ ಸಂಬಂಧಿಸಿದಂತೆ ಡಾ. ಸುಮತಿ ರಾಮಕೃಷ್ಣ ಗೌಡ ಇವರಿಗೆ ದಿನಾಂಕ: 12.09.2025 ಮತ್ತು 16.09.2025ರಂದು ಷೋಕಾಸ್ ನೋಟಿಸ್‌ಗಳನ್ನು ನೀಡಲಾಗಿರುತ್ತದೆ. ವಿಶ್ವವಿದ್ಯಾನಿಲಯವು ನೀಡಲಾಗಿರುವ **"ಷೋಕಾಸ್ ನೋಟಿಸ್"**ಗೆ ಡಾ. ಸುಮತಿ ರಾಮಕೃಷ್ಣ ಗೌಡರವರು ಲಿಖಿತ ವಿವರಣೆಯನ್ನು ಸಲ್ಲಿಸಿದ್ದು, ವಿದ್ಯಾರ್ಥಿಗಳು ಮಾಡಿರುವ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ.

ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪತ್ರಗಳಿಗೆ ಸಂಬಂಧಿಸಿದಂತೆ ಪ್ರಾರ್ಥಮಿಕ ಹಂತವಾಗಿ ಪರಿಶೀಲಿಸಿ, ವರದಿಯನ್ನು ನೀಡಲು ದಿನಾಂಕ: 15.10.2025ರ ಆದೇಶದನ್ವಯ 'ವಿಚಾರಣಾ ಸಮಿತಿ'ಯನ್ನು ರಚಿಸಲಾಗಿರುತ್ತದೆ.

ಮುಂದುವರಿದು, ಶ್ರೀಮತಿ ಸುನೀತ, ಸಹ ಪ್ರಾಧ್ಯಾಪಕರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಇವರು ಡಾ. ಸುಮತಿ ರಾಮಕೃಷ್ಣ ಗೌಡ ಇವರ ವಿರುದ್ಧ ವಿದ್ಯಾರ್ಥಿಗಳು ಪ್ರಾಜೆಕ್ಟ್ ಮಾಡಲು ಹಣ ಕೇಳಿರುವುದಾಗಿ ಆರೋಪಿಸಿ ದೂರು ನೀಡಿದ್ದು, ಈ ಸಂಬಂಧ ಡಾ. ಸುಮತಿ ರಾಮಕೃಷ್ಣ ಗೌಡರವರ ವಿರುದ್ಧ ಶೀಘ್ರವಾಗಿ ಕಾನೂನು ಕ್ರಮವನ್ನು ಜರುಗಿಸುವಂತೆ ಕೋರಿ ದಿನಾಂಕ: 16.10.2025ರಂದು ಮನವಿ ಪತ್ರ ಸಲ್ಲಿಸಿರುತ್ತಾರೆ. ದೂರಿಗೆ ಸಂಬಂಧಿಸಿದಂತೆ ಸಂಗ್ರಹಿಸಿರುವ whatsapp groupಗಳ screen shots, voice message ಮಧ್ಯವರ್ತಿಗಳ QR code, phone numberಗಳ ಮಾಹಿತಿಯನ್ನು ಡಿವಿಡಿ ರೂಪದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ (**ಅನುಬಂಧ-2**).

**ಕುಲಪತಿಗಳು** **ಕುಲಸಚಿವರು**

ಡಾ. ಜಗದೀಶ್ ಬಾಬು, ಸಹಾಯಕ ಪ್ರಾಧ್ಯಾಪಕ(ಅಮಾನತ್ತು), ಇವರು ಡಾ. ಸುಮತಿ ರಾಮಕೃಷ್ಣ ಗೌಡ, ಇವರ ವಿರುದ್ಧ ವಿದ್ಯಾರ್ಥಿಗಳು ಲಂಚದ ಆರೋಪ ಮಾಡಿ ಸಲ್ಲಿಸಿರುವ ದೂರಿಗೆ ಸಂಬಂಧಿಸಿದಂತೆ ಸೈಬರ್ ಪೊಲೀಸ್ / ಲೋಕಾಯುಕ್ತ ಠಾಣೆಯಲ್ಲಿ ದೂರು ದಾಖಲಿಸಿ ಕಾನೂನು ಮತ್ತು ಇಲಾಖಾ ಕ್ರಮ ಜರುಗಿಸುವಂತೆ ಹಾಗೂ ಸದರಿಯವರನ್ನು ಅಮಾನತ್ತಿನಲ್ಲಿಟ್ಟು ಇಲಾಖಾ ಕ್ರಮ ಜರುಗಿಸುವಂತೆ ಕೋರಿ ದಿನಾಂಕ: 17.10.2025ರ ಪತ್ರವನ್ನು ಸಲ್ಲಿಸಿರುತ್ತಾರೆ.

ಈ ಸಂಬಂಧ ಪ್ರಕರಣದ ಪ್ರಮುಖ ಸಾಕ್ಷಿಯಾಗಿ ನಟರಾಜ್ ಎಂ.ಟಿ ರವರ ಖಾತೆಯ 25.01.2025 ರಿಂದ 17.09.2025ರ ಅವಧಿಯ ಬ್ಯಾಂಕ್ ಖಾತೆಯ ಅನ್ನು, ಸಂಬಂಧಪಟ್ಟ whatsapp groupಗಳ screen shots ವಿದ್ಯಾರ್ಥಿಗಳ ಮತ್ತು ಡಾ. ಸುಮತಿ ಆರ್. ಗೌಡ voice messages ಮತ್ತು ಸಂಬಂಧಪಟ್ಟ ಮಧ್ಯವರ್ತಿಗಳ QR code, phone number ಎಲ್ಲವನ್ನು ತಮ್ಮ ಪತ್ರದ ಜೊತೆಗೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ **(ಅನುಬಂಧ-3)**.

ಮೇಲಿನ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಡಾ. ಸುಮತಿ ರಾಮಕೃಷ್ಣ ಗೌಡರವರ ವಿರುದ್ಧ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಹಾಗೂ ಡಾ. ಸುನೀತ ಮತ್ತು ಡಾ. ಜಗದೀಶ್ ಬಾಬು ಇವರುಗಳು ಸಲ್ಲಿಸಿರುವ ಪತ್ರಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಚರ್ಚೆ ಹಾಗು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

*****

ಸದಸ್ಯರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್ ರವರು ಮಾತನಾಡಿ ಡಾ. ಸುಮತಿ ರಾಮಕೃಷ್ಣ ಗೌಡರವರ ವಿಷಯಕ್ಕೆ ಸಂಬಂಧಪಟ್ಟಂತೆ, ಹಿಂದಿನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಆಕ್ಸಿಸ್ ಬ್ಯಾಂಕ್ ವಿಷಯಕ್ಕೆ ಸಂಬಂಧಪಟ್ಟಂತೆ 97 ಲಕ್ಷ ರೂಪಾಯಿಗಳ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಹೊರಗಿನ ಸಂಸ್ಥೆಯವರು ಪರೀಕ್ಷೆ ನಡೆಸುವ ಸಂಬಂಧ ಸಂಯೋಜನಾಧಿಕಾರಿಗಳಾಗಿ ನೇಮಿಸಿ, ಅವರ ಹೆಸರಿನಲ್ಲಿ ಖಾತೆ ತೆರೆದು ಸದರಿ ಸಂಸ್ಥೆಯವರು ನೀಡಿದ ಹಣವನ್ನೆಲ್ಲಾ ಇವರ ಖಾತೆಗೆ ಜಮೆ ಮಾಡಿಸಿಕೊಂಡು ಸಂಯೋಜನಾಧಿಕಾರಿಗಳ ಖಾತೆಯಿಂದ ಚಿನ್ನದ ಅಂಗಡಿಗೂ ಸಹ ಹಣ ವರ್ಗಾವಣೆಯಾಗಿರುವ ಬಗ್ಗೆ ಮಾಹಿತಿಗಳಿದ್ದು, ಇಂತಹ ಘಟನೆಗಳ ಸಂಬಂಧ ಸದರಿ ನೌಕರರನ್ನು ಸರ್ಕಾರ/ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಅಮಾನತ್ತು ಮಾಡಲು ಈಗಾಗಲೇ ತೀರ್ಮಾನಿಸಲಾಗಿದ್ದರೂ ಯಾವುದೇ ಕ್ರಮವಹಿಸಿರುವುದಿಲ್ಲ.

ಮುಂದುವರೆದಂತೆ, ಇತ್ತೀಚಿನ ದಿನಗಳಲ್ಲಿ ಕರಾಮುವಿಯಲ್ಲಿ ಪ್ರವೇಶಾತಿ ಪಡೆದಿರುವ ಬಿ.ಸಿ.ಎ ವಿದ್ಯಾರ್ಥಿಗಳು ಪ್ರಾಜೆಕ್ಟ್ ಕಾರ್ಯಗಳನ್ನು ಪೂರ್ಣಗೊಳಿಸಲು ಲಂಚ ಪಡೆಯುತ್ತಿರುವುದಾಗಿ ಆರೋಪಿಸಿ ಇ-ಮೇಲ್ ಪತ್ರಗಳ ಮೂಲಕ ಹಾಗೂ ಆ ವಿಭಾಗದ ಸಹಾಯಕರ ಖಾತೆಯನ್ನು ನೀಡಿ ಅವರ ಖಾತೆ ಹಣ ಹಾಕಿಸಿಕೊಂಡು ಆ ಹಣವನ್ನು ಪಡೆಯುವ ದೃಷ್ಟಿಯಿಂದ ಪ್ರಕರಣದ ಪ್ರಮುಖ ಸಾಕ್ಷಿಯಾಗಿ ನಟರಾಜ್ ಎಂ.ಟಿ ರವರ ಖಾತೆಯ 25.01.2025 ರಿಂದ 17.09.2025ರ ಅವಧಿಯ ಬ್ಯಾಂಕ್ ಖಾತೆಯ ಅನ್ನು, ಸಂಬಂಧಪಟ್ಟ whatsapp groupಗಳ screen shots ವಿದ್ಯಾರ್ಥಿಗಳ ಮತ್ತು ಡಾ. ಸುಮತಿ ಆರ್. ಗೌಡ voice messages ಮತ್ತು ಸಂಬಧಪಟ್ಟ ಮಧ್ಯವರ್ತಿಗಳ QR code, phone number ದೂರನ್ನು ಸಹ ಪರಿಶೀಲಿಸಲಾಗಿದ್ದು, ಇವರುಗಳ ಮೇಲೆ ಯಾವುದೇ ಕ್ರಮವಹಿಸಿರುವುದಿಲ್ಲ. ಇದಕ್ಕೆ ಕಾರಣಗಳೇನು ಎಂದು ಪ್ರಶ್ನಿಸಿದರು.

ಸದಸ್ಯರಾದ ಶ್ರೀ. ಕೆ. ಹರೀಶ್ ಗೌಡರು ಮಾತನಾಡಿ ಡಾ. ಸುಮತಿ ರಾಮಕೃಷ್ಣ ಗೌಡರವರನ್ನು ಈ ಕೂಡಲೇ ಅಮಾನತ್ತು ಮಾಡಬೇಕು. ಆದಾಗ್ಯೂ ವಿದ್ಯಾರ್ಥಿಗಳು ಯಾವ ಖಾತೆಗೆ ಹಣ ಹಾಕಿಸಿಕೊಂಡು ಅವುಗಳನ್ನು ಅವರಿಗೆ ನೀಡಿರುವ ತಾತ್ಕಾಲಿಕ ನೌಕರರನ್ನೂ ಸಹ ಈ ಕೂಡಲೇ ಕೆಲಸದಿಂದ ತೆಗೆಯಬೇಕೆಂದು ತಿಳಿಸಿದರು.

**ಕುಲಪತಿಗಳು** **ಕುಲಸಚಿವರು**

ಸದಸ್ಯರುಗಳಾದ ಡಾ. ಬಿ.ಜಿ. ಪಾಟೀಲ್, ಶ್ರೀ. ಡಿ. ರವಿಶಂಕರ್, ಶ್ರೀಮತಿ. ಮಾಲತಿ .ಟಿ, ಶ್ರೀಮತಿ. ಪ್ರಾಚಿ ಗೌಡ, ಶ್ರೀ, ರಮೇಶ್ ಗುಬ್ಬೇವಾಡ ಮತ್ತು ಶ್ರೀ. ಮಂಜು .ಆರ್. ರವರು ಮಾತನಾಡಿ ಈ ರೀತಿಯ ನೌಕರರ ಮೇಲೆ ಕೂಡಲೇ ಶಿಸ್ತು ಕ್ರಮವಹಿಸುವುದು ಸೂಕ್ತವಾಗಿರುತ್ತದೆ. ಇಂತಹವರುಗಳನ್ನು ಹಾಗೆಯೇ ಬಿಡುವುದರಿಂದ ಇಂತಹ ಸಮಸ್ಯೆಗಳನ್ನು ಆಗಾಗ್ಗೆ ಬರುತ್ತಿರುತ್ತದೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈ ವಿಷಯದ ಬಗ್ಗೆ ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಡಾ. ಸುಮತಿ ರಾಮಕೃಷ್ಣ ಗೌಡರವರನ್ನು ಈ ಕೂಡಲೇ ಅಮಾನತ್ತು ಮಾಡಬೇಕು. ಆದಾಗ್ಯೂ ವಿದ್ಯಾರ್ಥಿಗಳು ಯಾವ ಖಾತೆಗೆ ಹಣ ಹಾಕಿಸಿಕೊಂಡು ಅವುಗಳನ್ನು ಅವರಿಗೆ ನೀಡಿರುವ ತಾತ್ಕಾಲಿಕ ನೌಕರರನ್ನು ಸಹ ಕೂಡಲೇ ಕೆಲಸದಿಂದ ತೆಗೆಯಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಖಾಯಂ ನೌಕರರುಗಳಿಗೆ ವಿಶ್ವವಿದ್ಯಾನಿಲಯದಿಂದ ಪ್ರತಿ ಮಾಹೆ ಅಂತಿಮ ದಿನಾಂಕದಂದು ವೇತನ ಪಾವತಿಯಾಗುತ್ತಿದ್ದರೂ ಸಹ ಅನಾವಶ್ಯಕವಾಗಿ ವಿದ್ಯಾರ್ಥಿಗಳಿಂದ ಹಣ ಪಡೆಯುತ್ತಿರುವ ಇಂತಹ ನೌಕರರುಗಳ ಮೇಲೆ ಕಠಿಣವಾದ ಶಿಸ್ತು ಕ್ರಮ ಜರುಗಿಸಲು ವಿಚಾರಣಾ ಸಮಿತಿಯನ್ನು ರಚಿಸಲಾಗುತ್ತದೆ. ಅಂತಹ ಸಮಿತಿಗೆ ಶ್ರೀ. ಕೆ. ಹರೀಶ್ ಗೌಡರನ್ನು ಸದಸ್ಯರನ್ನಾಗಿ ನೇಮಿಸಲು ಸಭೆಯು ತೀರ್ಮಾನಿಸಿತು.

#####

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

**ಸದಸ್ಯರಾದ ಶ್ರೀ. ಹರೀಶ್ ಗೌಡರು ಮಂಡಿಸಿದ ವಿಷಯ:**

1) **ಸದಸ್ಯರಾದ ಶ್ರೀ. ಹರೀಶ್ ಗೌಡರು ಮಾತನಾಡಿ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ ನೌಕರರುಗಳಾದ 17 ಪ್ರಾದೇಶಿಕ ನಿರ್ದೇಶಕರುಗಳಿಗೆ 7ನೇ ವೇತನ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ ಸ್ಕೇಲ್ ನೌಕರರುಗಳಿಗೆ 7ನೇ ವೇತನ ನೀಡುವ ಬಗ್ಗೆ.**

– * –

ಮಾನ್ಯ ಕುಲಪತಿಗಳು ಮಾತನಾಡಿ, 181ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಗ್ರೇಡೆಡ್ ಪೇ ನೌಕರರುಗಳಿಗೆ 7ನೇ ವೇತನ ನೀಡಲು ತೀರ್ಮಾನಿಸಲಾಗಿತ್ತು. ಅನಂತರ ಹಣಕಾಸು ಸಮಿತಿ ಸಭೆಯಲ್ಲಿ ವಿಷಯ ಚರ್ಚೆಯಾಗಿ ಆ ನಡಾವಳಿಯನ್ನು 183ನೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಅನುಮೋದನೆಗೆ ಮಂಡಿಸಿದ ಸಂದರ್ಭದಲ್ಲಿ ಚರ್ಚೆಯಲ್ಲಿ ಬೇರೆ ತೀರ್ಮಾನವಾಗಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಸದರಿ ವಿಷಯದ ಬಗ್ಗೆ ಈಗಾಗಲೇ ವಿಶ್ವವಿದ್ಯಾನಿಲಯದ ಗ್ರೇಡೆಡ್ ಪೇ ನೌಕರರುಗಳಿಗೆ 7ನೇ ವೇತನ ನೀಡುವ ಸಂಬಂಧ ಆಕ್ಷೇಪಣೆಗಳು ಬಂದಿರುತ್ತದೆ. ಜೊತೆಗೆ ಆಡಿಟ್ ಆಕ್ಷೇಪಣೆಗಳಲ್ಲಿ ನೌಕರರಿಗೆ ಪಾವತಿಯಾಗಿರುವ ಹಣವನ್ನು ವಿಶ್ವವಿದ್ಯಾನಿಲಯದ ಕುಲಪತಿಗಳು/ ಕುಲಸಚಿವರು/ಹಣಕಾಸು ಅಧಿಕಾರಿಗಳಿಂದ ಪಡೆಯಲು ಸೂಚಿಸಲಾಗುತ್ತಿದೆ ಎಂದು ತಿಳಿಸಿದರು.

*****

ಕುಲಪತಿಗಳು ಕುಲಸಚಿವರು

ತೀರ್ಮಾನ:

1) ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸಭೆಯು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ / ಕಾಲಿಕ ವೇತನ ಶ್ರೇಣಿಯ 17 ಪ್ರಾದೇಶಿಕ ನಿರ್ದೇಶಕರುಗಳಿಗೆ 7ನೇ ವೇತನವನ್ನು ಮಾತ್ರ ನೀಡಲು ಇಂದಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ತೀರ್ಮಾನಿಸಿದರು.

2) ಆದಾಗ್ಯೂ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಪದನಾಮಗಳಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗ್ರೇಡೆಡ್ ಪೇ ನೌಕರರುಗಳಿಗೆ 7ನೇ ವೇತನವನ್ನು ಮಾತ್ರ ನೀಡಲು ಇಂದಿನ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಸರ್ವಾನುಮತದಿಂದ ತೀರ್ಮಾನಿಸಿದರು.

#####

2) ಸದಸ್ಯರಾದ ಶ್ರೀ. ಹರೀಶ್ ಗೌಡರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಹುದ್ದೆಗಳು ಖಾಲಿ ಇರುತ್ತದೆ ಅವುಗಳಿಗೆ ಏಕೆ ಬಡ್ತಿ ನೀಡುತ್ತಿರುವುದಿಲ್ಲವೆಂದು ಕೇಳಿದರು.

– * –

ಮಾನ್ಯ ಕುಲಪತಿಗಳು ಮಾತನಾಡಿ, ಈಗಾಗಲೇ ಹಲವು ನೌಕರರುಗಳಿ ಬಡ್ತಿಗಳನ್ನು ನೀಡಲಾಗಿದೆ ಎಂದು ತಿಳಿಸಿದರು.

*****

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಕೆಲವು ಪರಿನಿಯಮಗಳನ್ನು ರಚಿಸಲಾಗಿದ್ದು, ಸದರಿ ಪರಿನಿಯಮಗಳನ್ನು ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು, ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕೆ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಸದರಿ ಪರಿನಿಯಮಗಳಿಗೆ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತವನ್ನು ಕಾಯ್ದಿರಿಸಿ ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ನೀಡಿರುವ ಪದೋನ್ನತಿ/ಕೆಸಿಎಸ್‌ಆರ್.ನಿಯಮ 32ರ ಅಡಿಯಲ್ಲಿ ಪ್ರಭಾರ ಪದೋನ್ನತಿ ನೀಡಿದ್ದು, ಅದರಂತೆ ಪದೋನ್ನತಿಗೆ ಅರ್ಹರಿರುವ ಎಲ್ಲಾ ಹುದ್ದೆಗಳ ನೌಕರರುಗಳಿಗೆ ಈ ರೀತಿಯ ಸೌಲಭ್ಯವನ್ನು ನೀಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

3) ಸದಸ್ಯರಾದ ಶ್ರೀ. ಹರೀಶ್ ಗೌಡರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಶ್ರೀ. ಶ್ರೀನಿವಾಸ .ವಿ ರವರಿಗೆ ಡಾಟಾ ಎಂಟ್ರಿ ಹುದ್ದೆಯಿಂದ ಕನ್ನಡ ಶೀಘ್ರಲಿಪಿಗಾರ ಹುದ್ದೆಗೆ ಪದೋನ್ನತಿ ನೀಡಿದ್ದರೂ ಸಹ ಇದುವರೆಗೆ ಏತಕ್ಕೆ **Pay fixation** ಮಾಡಿರುವುದಿಲ್ಲವೆಂದು ಕೇಳಿದರು.

– * –

ಕುಲಸಚಿವರು ಮಾತನಾಡಿ, ಸದರಿ ವಿಷಯಕ್ಕೆ ಸಂಬಂಧಪಟ್ಟ ಕಡತವನ್ನು ಈಗಾಗಲೇ ಪರಿಶೀಲಿಸಲಾಗಿದ್ದು, ಈ ಬಗ್ಗೆ ಸರ್ಕಾರದಿಂದ ಆಕ್ಷೇಪಣೆಗಳು ಹಾಗೂ ಆಡಿಟ್ ಆಕ್ಷೇಪಣೆಯೂ ಸಹ ಬಂದಿರುತ್ತದೆ. ಇವುಗಳ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮವಹಿಸಲಾಗುವುದೆಂದು ತಿಳಿಸಿದರು.

*****

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಶ್ರೀ. ಶ್ರೀನಿವಾಸ .ವಿ, ಡಾಟಾ ಎಂಟ್ರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ನಂತರದ ದಿನಗಳಲ್ಲಿ ಅವರನ್ನು ಕನ್ನಡ ಶೀಘ್ರಲಿಪಿಗಾರರ ಹುದ್ದೆಗೆ ಪದೋನ್ನತಿ ನೀಡಲಾಗಿದ್ದು, ಸದರಿಯವರಿಗೆ ಕೂಡಲೇ ನಿಯಮಾನುಸಾರ **Pay fixation** ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಕುಲಪತಿಗಳು ಕುಲಸಚಿವರು

ಸದಸ್ಯರಾದ ಶ್ರೀ. ಡಿ. ರವಿಶಂಕರ್ ರವರು ಮಂಡಿಸಿದ ವಿಷಯ:

4) ಸದಸ್ಯರಾದ ಶ್ರೀ. ಡಿ. ರವಿಶಂಕರ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಗೇಡೆಡ್ ಪೇ ನೌಕರರುಗಳಾದ ಶ್ರೀ. ಪ್ರಭಾಕರ .ಡಿ.ಎಸ್ ಮತ್ತು ಶ್ರೀ. ನಾಗರಾಜು .ಎಸ್ ರವರುಗಳಿಗೆ ದ್ವಿತೀಯ ದರ್ಜೆ ನೌಕರರುಗಳಾಗಿ ನೇಮಿಸಿದ್ದರೂ ಸಹ ವೇತನ ನಿಗಧಿಪಡಿಸದಿರುವ ಬಗ್ಗೆ.

– * –

ಶ್ರೀ. ಡಿ. ರವಿಶಂಕರ್ ರವರು ಮಾತನಾಡಿ ಈ ಮೇಲ್ಕಂಡ ಇಬ್ಬರೂ ಗೇಡೆಡ್ ಪೇ ನೌಕರರುಗಳು ಪರಿಚಾರಕ ಹುದ್ದೆಯಿಂದ ದ್ವಿತೀಯ ದರ್ಜೆ ನೌಕರರುಗಳಾಗಿ ಪದನಾಮ ಬದಲಾವಣೆಗೊಂಡಿದ್ದರೂ ಆ ಹುದ್ದೆಯ ವೇತನವನ್ನು ಇದುವರೆಗೂ ನಿಗಧಿಪಡಿಸಿರುವುದಿಲ್ಲ. ಇದಕ್ಕೆ ಯಾರು ಕಾರಣರು ಎಂಬುದು ತಿಳಿದು ಬಂದಿರುವುದಿಲ್ಲವೆಂದು ತಿಳಿಸಿದರು.

*****

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ವಿಶ್ವವಿದ್ಯಾನಿಲಯದಲ್ಲಿ ಗೇಡೆಡ್ ಪೇ ನೌಕರರುಗಳಾಗಿ ಶ್ರೀ. ಪ್ರಭಾಕರ .ಡಿ.ಎಸ್ ಮತ್ತು ಶ್ರೀ. ನಾಗರಾಜು .ಎಸ್ ರವರುಗಳಿಗೆ ಪರಿಚಾರಕ ಹುದ್ದೆಯಿಂದ ದ್ವಿತೀಯ ದರ್ಜೆ ನೌಕರರುಗಳಾಗಿ ಪದನಾಮ ಬದಲಾವಣೆಗೊಂಡಿದ್ದು, ಈ ಹುದ್ದೆಗೆ ಸಮನಾಗಿ ಗೇಡೆಡ್ ಪೇ ವೇತನವನ್ನು ನಿಗಧಿಪಡಿಸಿ ಪಾವತಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

#####

5) ಸದಸ್ಯರಾದ ಶ್ರೀ. ಡಿ. ರವಿಶಂಕರ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೌಕರರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವ ಶ್ರೀ. ಮಹೇಶ .ಕೆ ರವರು ಸೇವಕರಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದು, ಅವರನ್ನು ಗಾಡರ್ನರ್ ಕೆಲಸ ಮಾಡಿಸುತ್ತಿರುವ ಬಗ್ಗೆ.

– * –

ಶ್ರೀ. ಡಿ. ರವಿಶಂಕರ್ ರವರು ಮಾತನಾಡಿ ಶ್ರೀ. ಮಹೇಶ .ಕೆ ರವರು ಸೇವಕರಾಗಿ ತಾತ್ಕಾಲಿಕ ನೌಕರರಾಗಿ ನೇಮಕಗೊಂಡಿದ್ದು, ಅವರಿಂದ ಗಾಡರ್ನರ್ ಕೆಲಸ ಮಾಡಿಸುತ್ತಿರುವುದು ಸರಿಯಿಲ್ಲವೆಂದು ತಿಳಿಸಿದರು.

*****

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಶ್ರೀ. ಮಹೇಶ .ಕೆ ಸೇವಕ ಇವರು ತಾತ್ಕಾಲಿಕ ನೌಕರರಾಗಿ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಣೆ ಮಾಡುತ್ತಿದ್ದು, ಸದರಿಯವರನ್ನು ಗಾಡರ್ನರ್ ಕೆಲಸದಿಂದ ವಿಮುಕ್ತಿಗೊಳಿಸಿ ಕಚೇರಿಯಲ್ಲಿ ಸೇವಕರಾಗಿ ಕರ್ತವ್ಯ ನಿರ್ವಹಣೆ ಮಾಡುವಂತೆ ಸೂಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಂಡಿಸಿದ ವಿಷಯ:

6) ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ ವಿಶ್ವವಿದ್ಯಾನಿಲಯದಲ್ಲಿ ಡೀನ್(ಶೈಕ್ಷಣಿಕ) ಮತ್ತು ಡೀನ್(ಅಧ್ಯಯನ ಕೇಂದ್ರ)ಗಳನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ನೀಡುವಂತೆ ಸೂಚಿಸಿದ್ದರೂ ಸಹ ಇದುವರೆಗೆ ಸಲ್ಲಿಸಿರುವುದಿಲ್ಲ. ಇದಕ್ಕೆ ಕಾರಣ ಕಾರಣವೇನು ಎಂದು ಕೇಳಿದರು.

– * –

ಮಾನ್ಯ ಕುಲಪತಿಗಳು ಮಾತನಾಡಿ ಈ ಬಗ್ಗೆ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ನೀಡಲಾಗುವುದೆಂದು ತಿಳಿಸಿದರು.

*****

ಕುಲಪತಿಗಳು ಕುಲಸಚಿವರು

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಡೀನ್(ಅಧ್ಯಯನ ಕೇಂದ್ರ) ರವರನ್ನು ನೇಮಿಸಲು ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ಸದಸ್ಯರುಗಳಿಗೆ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

7) ಸದಸ್ಯರಾದ ಡಾ. ಮಹೇಶ್ .ಎಸ್ ರವರು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಾದೇಶಿಕ ನಿರ್ದೇಶಕರುಗಳಾಗಿ ಕರ್ತವ್ಯ ನಿರ್ವಹಣೆ ಮಾಡುತ್ತಿರುವವರನ್ನು ಒಂದು ಪ್ರಾದೇಶಿಕ ಕೇಂದ್ರದಿಂದ ಬೇರೆ ಪ್ರಾದೇಶಿಕ ಕೇಂದ್ರಕ್ಕೆ ವರ್ಗಾವಣೆ ಮಾಡುವ ಬಗ್ಗೆ.

– * –

ಡಾ. ಮಹೇಶ್ .ಎಸ್ ರವರು ಮಾತನಾಡಿ ಹಿಂದಿನ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ಹಲವು ಪ್ರಾದೇಶಿಕ ಕೇಂದ್ರಗಳಲ್ಲಿ ಹಲವಾರು ವರ್ಷಗಳಿಂದ ಪ್ರಾದೇಶಿಕ ನಿರ್ದೇಶಕರುಗಳು ಅಲ್ಲಿಯೇ ಇರುವುದರಿಂದ ಅವರುಗಳನ್ನು ಒಂದೇ ಪ್ರಾದೇಶಿಕ ಕೇಂದ್ರದಲ್ಲಿ 2 ವರ್ಷಗಳ ಸೇವೆಯ ನಂತರ ಬೇರೆ ಬೇರೆ ಪ್ರಾದೇಶಿಕ ಕೇಂದ್ರಗಳಿಗೆ ವರ್ಗಾವಣೆ ಮಾಡಲು ಈಗಾಗಲೇ ವ್ಯವಸ್ಥಾಪನ ಮಂಡಳಿ ಸಭೆಯಲ್ಲಿ ತೀರ್ಮಾನಗಳಾಗಿದ್ದರೂ ಸಹ ಈ ಕಾರ್ಯವನ್ನು ಮಾಡಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

*****

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪಾದೇಶಿಕ ನಿರ್ದೇಶಕರುಗಳು ಒಂದೇ ಕೇಂದ್ರದಲ್ಲಿ 2(ಎರಡು) ವರ್ಷ ಸೇವೆಯ ನಂತರ ಬೇರೆ ಬೇರೆ ಪ್ರಾದೇಶಿಕ ಕೇಂದ್ರಗಳಿಗೆ ವರ್ಗಾವಣೆ ಮಾಡಲು ಸಭೆಯು ತೀರ್ಮಾನಿಸಿತು.

#####

ಸದಸ್ಯರಾದ ಶ್ರೀ. ಮಂಜು ಆರ್ ರವರು ಮಂಡಿಸಿದ ವಿಷಯ:

8) ಸದಸ್ಯರಾದ ಶ್ರೀ. ಮಂಜು .ಆರ್ ರವರು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ "ಮಹರ್ಷಿ ವಾಲ್ಮೀಕಿ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ" ವನ್ನು ಸ್ಥಾಪಿಸುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ.

– * –

ಮಾನ್ಯ ಕುಲಪತಿಗಳು ಮಾತನಾಡಿ ಈ ಬಗ್ಗೆ ಕ್ರಮವಹಿಸಲಾಗುವುದೆಂದು ತಿಳಿಸಿದರು.

*****

ತೀರ್ಮಾನ:

ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಮಹರ್ಷಿ ವಾಲ್ಮೀಕಿ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ" ವನ್ನು ಸಭೆಯಲ್ಲಿ ತೀರ್ಮಾನಿಸಲಾಯಿತು.

#####

9) ಸದಸ್ಯರಾದ ಶ್ರೀ. ಮಂಜು .ಆರ್ ರವರು ಮಾತನಾಡಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬೆಂಗಳೂರು ಪ್ರಾದೇಶಿಕ ನಿರ್ದೇಶಕರಾದ ಡಾ. ಎಂ. ಸುಧಾಕರ ರವರು ಪತ್ರಿಕಾ ಗೋಷ್ಠಿಯಲ್ಲಿ "ಆಡಳಿತ ಪಕ್ಷ"ದ ವಿರುದ್ಧವಾಗಿ ಮಾತನಾಡಿರುವುದರಿಂದ ಇವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

– * –

ಕುಲಪತಿಗಳು ಕುಲಸಚಿವರು

ಸದಸ್ಯರಾದ ಶ್ರೀ. ಅಡಗೂರು ಹೆಚ್. ವಿಶ್ವನಾಥ್‌ರವರು ಮಾತನಾಡಿ, ಈಗಾಗಲೇ ಸರ್ಕಾರಿ ನೌಕರರು ಆರ್.ಎಸ್.ಎಸ್ ವಿಷಯದ ಬಗ್ಗೆ ಮಾತನಾಡಿದ್ದು, ಈ ಸಂಬಂಧ ಅವರ ಮೇಲೆ ಕ್ರಮವಹಿಸುವಂತಿಲ್ಲ ಎಂದು ತಿಳಿಸಿದರು. ಆರ್.ಎಸ್.ಎಸ್ ಕಾರ್ಯಕ್ರಮಗಳನ್ನು ಸರ್ಕಾರಿ ಸ್ಥಳಗಳಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಅವಕಾಶ ಕಲ್ಪಿಸಬಾರದೆಂದು ತೀರ್ಮಾನವಾಗಿರುತ್ತದೆಂದು ಸಭೆಯ ಗಮನಕ್ಕೆ ತಂದರು.

ಈ ಬಗ್ಗೆ ಶ್ರೀ. ಡಿ. ರವಿಶಂಕರ್ ರವರು ಮಾತನಾಡಿ ಡಾ. ಎಂ. ಸುಧಾಕರ ರವರು ಆರ್.ಎಸ್.ಎಸ್ ವಿಷಯದ ಬಗ್ಗೆ ಮಾತನಾಡಿರುವುದಿಲ್ಲ. ಆಡಳಿತ ಪಕ್ಷದ ವಿರುದ್ಧವಾಗಿ ವರ್ತಿಸಿರುತ್ತಾರೆಂದು ತಿಳಿಸಿರುತ್ತಾರೆಂದು ಸಭೆಗೆ ತಿಳಿಸಿದರು.

ಶ್ರೀ. ಕೆ ಹರೀಶ್ ಗೌಡರು ಮಾತನಾಡಿ ಇಂತಹ ತಾತ್ಕಾಲಿಕ ಕಾಲಿಕ ವೇತನ ಶ್ರೇಣಿ ನೌಕರರುಗಳು ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಆಡಳಿತ ಪಕ್ಷದ ವಿರುದ್ಧವಾಗಿ ಮಾತನಾಡುವುದು ಸಮಂಜಸವಲ್ಲ. ಆದುದರಿಂದ ಸದರಿಯವರನ್ನು ಸೇವೆಯಿಂದ ವಜಾಗೊಳಿಸಬೇಕೆಂದು ತಿಳಿಸಿದರು.

*****

ತೀರ್ಮಾನ:

**ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ತಾತ್ಕಾಲಿಕ ಕಾಲಿಕ ವೇತನ ಶ್ರೇಣಿ ಪ್ರಾದೇಶಿಕ ನಿರ್ದೇಶಕರಾದ ಡಾ. ಎಂ. ಸುಧಾಕರ ರವರಿಗೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದು, ಪತ್ರಿಕಾ ಗೋಷ್ಠಿಗಳಲ್ಲಿ ಆಡಳಿತ ಪಕ್ಷದ ವಿರುದ್ಧವಾಗಿ ಮಾತನಾಡುವುದರಿಂದ ವಿಶ್ವವಿದ್ಯಾನಿಲಯಕ್ಕೆ ಧಕ್ಕೆ ಉಂಟಾಗುವುದರಿಂದ ಸದರಿ ನೌಕರರಿಗೆ ಎಚ್ಚರಿಕೆ ನೋಟೀಸ್ ನೀಡಿ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ಮಾನ್ಯ ಕುಲಪತಿಗಳು ಮಂಡಿಸಿದ ವಿಷಯ:

**10) National Council for Vocational Education and Training (NCVET) Ministry of Skill Development and Enterpreneurship Director send a letter regarding considering grant of a provisional recognition status as Awarding Body Dual Category (AB-Dual) to Karnataka State Open University by NCVET Reg.**

– * –

Hon'ble Vice-Chancellor explains the said matter to the meeting.

ಮುಂದುವರೆದಂತೆ, NCVET ಮಾನ್ಯತೆ ಪಡೆಯುವ ಸಂಬಂಧ ಸತತವಾಗಿ ಎರಡು ವರ್ಷಗಳಿಂದ ಪ್ರಯತ್ನ ಪಡಲಾಗಿ ಅಂತಿಮವಾಗಿ ನಮ್ಮ ವಿಶ್ವವಿದ್ಯಾನಿಲಯಕ್ಕೆ NCVET ಮಾನ್ಯತೆ ದೊರೆತಿದ್ದು, ಈ ಪ್ರಯತ್ನಕ್ಕೆ ಹಣಕಾಸು ಅಧಿಕಾರಿಗಳಾದ ಪ್ರೊ. ನಿರಂಜನ್ ರಾಜ್ ರವರ ಸಹಕಾರ ಮತ್ತು ಪ್ರಯತ್ನಗಳು ಬಹಳಷ್ಟಿದ್ದು, ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

*****

ತೀರ್ಮಾನ:

**ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಏಳಿಗೆಗಾಗಿ ಮಾನ್ಯ ಕುಲಪತಿಗಳು ಶ್ರಮಿಸುತ್ತಿರುವುದು ಪ್ರಸಂಶನೀಯ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಒಳ್ಳೆಯ ಹೆಸರು ಬರುತ್ತಿದೆ ಎಂದು ತಿಳಿಸಿದರು.**

#####

ಕುಲಪತಿಗಳು ಕುಲಸಚಿವರು

11) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಕೆಲವು ಪರಿನಿಯಮಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಿ ಅನುಮೋದನೆ ಪಡೆದ ನಂತರ ಮಾನ್ಯ ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿರುವ ಬಗ್ಗೆ.

– * –

ಮಾನ್ಯ ಕುಲಪತಿಗಳು ಮಾತನಾಡಿ ಕರಾಮುವಿಯಿಂದ ಹೊಸದಾಗಿ ರಚಿಸಲಾಗಿರುವ ಪರಿನಿಯಮಗಳನ್ನು ಮಾನ್ಯ. ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿರುವ ಕೆಲವು ಪರಿನಿಯಮಗಳನ್ನು ಕೆಲವು ಸ್ಪಷ್ಟೀಕರಣದೊಂದಿಗೆ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪರಿಷ್ಕೃತ ಪರಿನಿಯಮಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸಲ್ಲಿಸುವಂತೆ ಪತ್ರದಲ್ಲಿ ತಿಳಿಸಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.

*****

<u>ತೀರ್ಮಾನ:</u>

**ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ, ಕರಾಮುವಿಯಿಂದ ಸೃಜಿಸಲಾಗಿರುವ ಪರಿನಿಯಮಗಳನ್ನು ಮಾನ್ಯ. ಘನತೆವೆತ್ತ ಕುಲಾಧಿಪತಿಗಳ ಅಂಕಿತಕ್ಕಾಗಿ ಸರ್ಕಾರಕ್ಕೆ ಕಳುಹಿಸಿರುವ ಕೆಲವು ಪರಿನಿಯಮಗಳನ್ನು ಕೆಲವು ಸ್ಪಷ್ಟೀಕರಣದೊಂದಿಗೆ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಪರಿಷ್ಕೃತ ಪರಿನಿಯಮಗಳನ್ನು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಪುನರ್ ಮಂಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.**

#####

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 184ನೇ ಸಾಮಾನ್ಯ ಸಭೆಗೆ ಮಾನ್ಯ ಸದಸ್ಯರುಗಳು ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿರುವುದಕ್ಕೆ **ಮಾನ್ಯ ಕುಲಸಚಿವರು ಎಲ್ಲಾ ಸದಸ್ಯರುಗಳಿಗೂ ವಂದನೆಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.**

**ಕುಲಪತಿಗಳು** **ಕುಲಸಚಿವರು**